ಹಿತ್ತಲ ಗಿಡ

ಚಾತುರ್ಮಾಸಿಕ

ಪೈರು 7, ಕೊಯಿಲು 2, ಮೇ - ಆಗಸ್ಟ್, 2001

ಹಿತ್ತಲಗಿಡ ರೈತ, ವಿಜ್ಞಾನಿ,
ವಿದ್ಯಾರ್ಥಿ, ಸ್ವಯಂ ಸೇವಾ ಸಂಸ್ಥೆ
ಮತ್ತು ವ್ಯಕ್ತಿಗಳ
ಸಾಮೂಹಿಕ ಪ್ರಯತ್ನ

ಕರ್ನಾಟಕಕ್ಕೆ ಕೀರ್ತಿ ತಂದ ತಳಮಟ್ಟದ ಅನುಶೋಧಕರು





ಈ ಸಂಚಿಕೆಯಲ್ಲಿ

ಹಿತ್ತಲ ಗಿಡದ ವಿಶೇಷ ವ್ಯಕ್ತಿ 2

ದೇಶೀಯ ಜಾಣ್ಮೆ 4

ದೇಶೀಯ ಹತೋಟಿ 5

ಧಾನ್ಯ ಸಂಗ್ರಹಣೆ 7

ಪುಣ್ಯಕೋಟಿ 8

ಅಳಲೇ ಕಾಯಿ 9

ಗಟ್ಟಿಯಾಗಬೇಕಾಗಿರುವ ಹಿತ್ತಲಗಿಡ 11

ಕೂಚು ಭಟ್ಟ 12

ಅರಳೀ ಕಟ್ಟೆ 13

ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು
ಮೌಲ್ಯಗಳನ್ನು ಹುಟ್ಟು ಹಾಕುವ ಪ್ರಯತ್ನ

ದೇಶೀಯ ಜ್ಞಾನ ಮತ್ತು ಸಂಸ್ಥೆಗಳು, ರೈತ ಮೂಲದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತ ಶಕ್ತಿ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಸಂಪಾದಕ ಮಂಡಳಿ

ಗೌರವ ಸಂಪಾದಕ

ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ

ಸಹ ಪ್ರಾಧ್ಯಾಪಕ, ಕೃಷಿ ಅರ್ಥ ಶಾಸ್ತ್ರ ವಿಭಾಗ,
ಕೃಷಿ ವಿಶ್ವ ವಿದ್ಯಾನಿಲಯ, ಜಿ.ಕೆ.ವಿ.ಕೆ., ಬೆಂಗಳೂರು - 560 065
Ph: 3637002(O), 8560267(R)
email: hittalu@bgl.vsnl.net.in; prakashtnk@yahoo.com

ಉಪ ಸಂಪಾದಕಿ

ತೇಜಸ್ವಿನಿ ಶರ್ಮ

ಸಹ ಸಂಪಾದಕಿ

ಎಸ್. ಜಿ. ಶಶಿಕಲಾ

ಪ್ರಕಟಣಾ ಸಹಾಯಕರು

ವೈ.ಎನ್. ಮಂಜುನಾಥ್ ಮತ್ತು ಎಸ್. ವಿಜಯ್ ಕುಮಾರ್

ಪ್ರಕಟಣಾ ನಿರ್ವಾಹಕ

ಡಿ. ಎಂ. ಚಿತ್ರಶೇಖರ್

Honey Bee Other Regional Collaborators

Abeja (Spanish)
Mario Mejia Gutierrez
Carrera 43 No.10-50 Apto.502,
Telefono: 3368531 Cali, Valle, Colombia

Loksarvani (Gujarati)
Dilip Koradiya, SRISTI P.O.Box 15050
Ahmedabad, Gujarat - 380015

Makhir (Pahari)
Dr.A.Chandan, ERA, Khundian
District Kangra, Himachal Pradesh - 176030

Num Vali Velanmai (Tamil)
P. Vivekanandan
45, TPM Nagar, Virattipathu, Tamil Nadu - 625010

Sujh-Bujh Aas Paas Ki (Hindi)
Shalini Sharma
H-12 ODS Flats Lajpat Nagar 4
New Delhi - 110024

Tenetiga (Telugu)
Prof.(Mrs.) P. Geervani
201, Dream Apartment, Road No.3, Banjara Hills,
Hyderabad, Andra Pradesh - 500 034

ಸಂಪಾದಕೀಯ

ತಳಮಟ್ಟದ ಶೋಧನೆಗಳ ಹುಡುಕಾಟದ ಪ್ರಥಮ ರಾಷ್ಟ್ರೀಯ ಸ್ಪರ್ಧೆಯಲ್ಲಿ ಕರ್ನಾಟಕದ 11 ಜನ ಅನುಶೋಧಕರಿಗೆ ಬಹುಮಾನ ಬಂದಿದೆ. ಈ ರೀತಿಯ ಶೋಧನೆಗಳು ವಾಣಿಜ್ಯ ಚೌಕಟ್ಟಿನೊಳಗೆ ಗಟ್ಟಿಯಾಗಿ, ಆ ಮೂಲಕ ಅಂತಹಾ ತಳ ಮಟ್ಟದ ಅನುಶೋಧಕರಿಗೂ ಮತ್ತು ಸಮಾಜಕ್ಕೂ ಉಪಯೋಗವಾಗುವ ರೀತಿಯತ್ತ ನಾವು ನೀವು ಯೋಚಿಸಬೇಕಾಗಿದೆ.

ಆಂಧ್ರದ ಬಡರೈತರು ಮತ್ತು ರೈತ ಮಹಿಳೆಯರು ಆಂಧ್ರ ಸರ್ಕಾರದ ದೂರಗ್ರಾಹಿ 2020 ಯನ್ನು ಗಮನದಲ್ಲಿಟ್ಟುಕೊಂಡು ಇಡೀ ಜಾಗತೀಕರಣ ಪ್ರಕ್ರಿಯೆಯ ವಿರುದ್ಧವೇ ಎನ್ನಬಹುದಾದ ಒಂದು ಐತಿಹಾಸಿಕ ತೀರ್ಪು ನೀಡಿರುವರು. ನಮ್ಮ ರಾಜ್ಯವಿಂದು ಬರಗಾಲದ ಬವಣೆಯಲ್ಲಿ ಸಿಕ್ಕಿ, ರೈತರು ತಮ್ಮ ಬೆಳೆಗೆ ಒಳ್ಳೆಯ ಬೆಲೆ ಸಿಗದೇ ಸಾಲದ ಬವಣೆ ಅತಿಯಾಗಿ ಆತ್ಮಹತ್ಯೆಗಿಳಿಯುವ ಭೀಕರ ಪರಿಸ್ಥಿತಿಯಲ್ಲಿ ಸಿಲುಕಿರುವ ಸಂದರ್ಭದಲ್ಲಿ ಈ ಪ್ರಜಾತೀರ್ಪು ಜಾಗತೀಕರಣದ ಗಾಳಿಗೆ ಮೈಯೊಡ್ಡಿ ಜೈವಿಕ ತಂತ್ರಜ್ಞಾನೀಕರಣದಂತಹ ನಿರರ್ಥಕ ಕಸರತ್ತಿಗೆ ಕೈಹಾಕಿರುವ ಎಲ್ಲರ ಕಣ್ತೆರೆಯುವಂತೆ ಮಾಡಬೇಕಾಗಿದೆ.

ಜೀವವಿವಿಧತೆ, ಸಂರಕ್ಷಣೆ ತಳಮಟ್ಟದ ಶೋಧನೆಗಳನ್ನು ಗಟ್ಟಿ ಮಾಡುವ ಹಲವು ಮಹತ್ ಕಾರ್ಯಗಳ ಸಹಭಾಗಿತ್ವಕ್ಕೆ ಹಿತ್ತಲಗಿಡ ಬಳಗಕ್ಕೆ ಆಹ್ವಾನ ಬಂದಿರುತ್ತದೆ. ತಳಮಟ್ಟದ ಜನರ ಅನುಶೋಧನೆಗಳ ಒಂದು ರಾಷ್ಟ್ರೀಯ ಸ್ಪರ್ಧೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ಹಿತ್ತಲಗಿಡ ಬಳಗಕ್ಕೆ ತೃತೀಯ ಬಹುಮಾನ ದೊರೆತಿರುತ್ತದೆ. ಕೇಂದ್ರ ಸರ್ಕಾರದ ಆಶ್ರಯದಲ್ಲಿ ಸಾಕಾಣಿಕೆಗೊಳಪಟ್ಟಿರುವ ಜೀವ ವಿವಿಧತೆ ಬಗ್ಗೆ ಪ್ರಸ್ತಾಪನೆ ನಡೆಸಿ, ಅದನ್ನು ಸಂರಕ್ಷಿಸುವ ಬಗ್ಗೆ ಕಾರ್ಯನೀತಿ ಮತ್ತು ಯೋಜನೆ ತಯಾರಿಸಿ ಕೊಡುವ ಜವಾಬ್ದಾರಿಯನ್ನು ಹಿತ್ತಲಗಿಡದ ಸಂಪಾದಕರಿಗೆ ವಹಿಸಿಕೊಡಲಾಗಿರುತ್ತದೆ. ಇವೆಲ್ಲಾ ಹಿತ್ತಲಗಿಡ ಬಳಗಕ್ಕೆ ಸಂದ ಗೌರವವೆಂದು ನಾವು ಭಾವಿಸುತ್ತೇವೆ.

ಹಿತ್ತಲ ಗಿಡದ ಪೋಷಣೆಗೆ ಸಹಕಾರ:

ಪ್ರೊ. ಅನಿಲ್ ಕೆ. ಗುಪ್ತ, Honey Bee & SRISTI (Society for Research and Initiatives for Sustainable Technologies and Institutions), Indian Institute of Management, Vastavapur, Ahmedabad - 380 015, Ph: 79-6307241, email: anilg@nifindia.org, honeybee@sristi.org

ಮತ್ತು

ಕರ್ನಾಟಕ ಪ್ರದೇಶ ಕೃಷಿಕ ಸಮಾಜ, ನೃಪತುಂಗ ರಸ್ತೆ, ಬೆಂಗಳೂರು - 560 001, ದೂರವಾಣಿ: 080- 2210877

"ಪ್ರಜಾತೀರ್ಪು" - ಜಾಗತೀಕರಣ ಶಕ್ತಿಗಳಿಗೊಂದು ದಿಟ್ಟ ಸವಾಲು

ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿ

ಹೈದರಾಬಾದಿನಿಂದ ಸುಮಾರು 100 ಕಿ.ಮಿ. ದೂರದ ಕರ್ನಾಟಕ-ಆಂಧ್ರ ಗಡಿಯಲ್ಲಿನ ಮೇಡಕ್ ಜಿಲ್ಲೆಯ ಪಸ್ತಾಪುರ ಶಹರಿನ ಸಮೀಪದ 'ಕೃಷಿ ವಿಜ್ಞಾನ ಕೇಂದ್ರ'ದಲ್ಲಿ ಕಳೆದ ಜೂನ್ ತಿಂಗಳ ಅಂತ್ಯದ ವಾರದಲ್ಲಿ ಮಹತ್ ಘಟನೆಯೊಂದಕ್ಕೆ ಸದ್ದಿಲ್ಲದೆ ಭೂಮಿಕೆ ತಯಾರಾಗುತ್ತಿತ್ತು. ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರ ಬಾಬು ನಾಯ್ಡುರವರ ಅತ್ಯಂತ ಆಶಾದಾಯಕ "2020 ದೃಷ್ಟಿ ಕೋನ "(vision 2020) ನೀತಿಯನ್ನೇ ಮೂಲವಾಗಿಟ್ಟುಕೊಂಡು ಆಂಧ್ರ ರಾಜ್ಯಕ್ಕೆ ಭವಿಷ್ಯದಲ್ಲಿ ಕೃಷಿ ಮತ್ತು ಆಹಾರ ವ್ಯವಸ್ಥೆ ಹೇಗಿರಬೇಕೆಂದು ರಾಜ್ಯದ ವಿವಿದೆಡೆಗಳಿಂದ ಬಡರೈತರು, ಪರಿಶಿಷ್ಟ ಜಾತಿ ಮತ್ತು ಪಂಗಡಗಳನ್ನು ಪ್ರತಿನಿಧಿಸುವ ಮಹಿಳೆಯರೇ ಅಧಿಕವಾಗಿರುವ 19 ಜನರ ಒಂದು ತೀರ್ಪುಗಾರ ಮಂಡಳಿ ನಿರ್ಣಯ ನೀಡಲು ಸೇರಿತ್ತು. ಈ ಮಂಡಳಿ ಒಂದು ವಾರಗಳ ಸತತ ಚರ್ಚೆ. ವಿಚಾರವಿನಿಮಯ ಕಸರತ್ತು ನಡೆಸುತ್ತಿತ್ತು. ಈ ವಿಶಿಷ್ಠ ತೀರ್ಪುಗಾರರ ಮಂಡಳಿಯ ಮುಂದೆ "2020 ದೃಷ್ಟಿ ಕೋನ " ವಲ್ಲದೆ, ಇಂದು ವಿಶ್ವ ವಾಣಿಜ್ಯ ಹಿನ್ನೆಲೆಯಲ್ಲಿ ಮೇಲೇಳುತ್ತಿರುವ ರಫ್ತು ಆಧಾರಿತ ಸಾವಯವ ಕೃಷಿ ಹಾಗೇ ಸ್ಥಳೀಯ ಸಂಪನ್ಮೂಲ ಮತ್ತು ಅಗತ್ಯಗಳಿಗೆ ಒತ್ತು ಕೊಡುವ ಗಾಂಧೀಜೀಯ ಕನಸಿನ ಸ್ವಾವಲಂಬನೆಯ ಕೃಷಿ ಪದ್ಧತಿ ಹೀಗೆ ಮೂರು ಪರ್ಯಾಯಗಳನ್ನಿಡಲಾಯಿತು. ಇವುಗಳ ಬಗ್ಗೆ ವಿವರವಾದ ವಿಡಿಯೋ ಪ್ರದರ್ಶನ, ಹಾಗೇ ದೇಶವಿದೇಶದ ತಜ್ಞರು. ಬುದ್ಧಿಜೀವಿಗಳಿಂದ ವಾದ ಮಂಡಿಸಲಾಯಿತು. ಅದೂ ಜಾಗತೀಕರಣದಿಂದ ಹಿಡಿದು ಕ್ಲಿಷ್ಟ ಜೈವಿಕ ತಂತ್ರಜ್ಞಾನದಂತಹ ವಿಚಾರಗಳವರೆಗೆ. ಈ ರೈತ ಅದಾಲತ್ತಿನಲ್ಲಿ ದೇಶೀಯ - ಪಾರಂಪರಿಕ ಕೃಷಿಯ ಬಗ್ಗೆ ವಾದ ಮಂಡಿಸುವ ಅವಕಾಶ ಹಿತ್ತಲಗಿಡದ ಸಂಪಾದಕರಿಗೆ ದೊರೆತಿರುತ್ತದೆ. ಈ ಅನನ್ಯ ಪ್ರಯೋಗದ ಹಿಂದೆ ಡೆಕ್ಕನ್ ಡೆವಲಪ್‌ಮೆಂಟ್ ಸಂಸ್ಥೆಯ ಪಿರಿಯಾಪಟ್ಟಣ ಸತೀಶ್ ಮತ್ತು ಅವರ ಜೀವ ವೈವಿಧ್ಯ ಸಂರಕ್ಷಣಾ ಮೈತ್ರಿಕೂಟ, ಹೈದರಾಬಾದ್ ವಿಶ್ವ ವಿದ್ಯಾನಿಲಯಗಳು ಹೆಗಲುಕೊಟ್ಟು ನಿಂತಿದ್ದರೆ, ಇಂಗ್ಲೆಂಡ್ ದೇಶದ ಎರಡು ಪ್ರಮುಖ ಸಂಸ್ಥೆಗಳಾದ ಐ.ಐ. ಇ.ಡಿ. (International Institute of Environment and Development) ಮತ್ತು ಐ.ಡಿ. ಎಸ್. (Institute for Development Studies) ಗಳು ಸಹಾಯ ಹಸ್ತ ನೀಡಿದ್ದವು. ದೇಶ ವಿದೇಶಗಳ ಸುದ್ದಿ ಮತ್ತು ಪ್ರಸಾರ ಮಾಧ್ಯಮಗಳ ಮೇಳವೇ ಇಲ್ಲಿ ಜರುಗಿ ಇಡೀ ಸಮಾರಂಭವನ್ನು ಮಾಹಿತಿ ತಂತ್ರಜ್ಞಾನದ ಚೌಕಟ್ಟಿನೊಳಗೆ ಜರುಗಿಸಿ ಅಚ್ಚುಕಟ್ಟಾಗಿ ದಾಖಲಿಸಿದ್ದು ಮತ್ತೊಂದು ವಿಶೇಷ. ಅತ್ಯಂತ ತಳಮಟ್ಟದ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯಿಂದ ಬಂದಿದ್ದರೂ ಈ ಅನನ್ಯ ಪ್ರಯೋಗದಲ್ಲಿ ತೊಡಗಿಸಿಕೊಂಡು, ಕ್ಲಿಷ್ಟ ವಿಚಾರಗಳನ್ನು ಅರಗಿಸಿಕೊಳ್ಳುತ್ತಾ ಆ ತೀರ್ಪು ಮಂಡಳಿ ನೀಡಿರುವ ತೀರ್ಪು, ಈ ದೇಶದಲ್ಲಿ ಜಾಗತೀಕರಣ, ಖಾಸಗೀಕರಣ, ಉಧಾರೀಕರಣ, ತಾಂತ್ರೀಕರಣ (ಮಾಹಿತಿ ಮತ್ತು ಜೈವಿಕ) ಗಳಿಗೆ ವಾಲುತ್ತಿರುವ ವ್ಯಕ್ತಿ ಮತ್ತು ಶಕ್ತಿಗಳಿಗೆಲ್ಲಾ ದಿಟ್ಟ ಸವಾಲಾಗುವುದರಲ್ಲಿ ಸಂಶಯವಿರದು. ಆ ತೀರ್ಪಿನ ವಿವರವನ್ನು ಈ ಮುಂದೆ ಕೊಡಲಾಗಿದೆ.

ಸಮಗ್ರ ದೃಷ್ಟಿಕೋನ:

ಮೂಲ ಆಶಯ: ಆಹಾರ ಮತ್ತು ಕೃಷಿಯಲ್ಲಿ ಸ್ವಾವಲಂಬನೆ, ಸಂಪನ್ಮೂಲಗಳ ಮೇಲೆ ಸಮುದಾಯದ ಹತೋಟಿ, ಈ ಮಣ್ಣಿನ ಫಲವತ್ತತೆ, ಬೆಳೆ, ಮರ ಮತ್ತು ಜಾನುವಾರುಗಳ ವೈವಿಧ್ಯಗಳ ರಕ್ಷಣೆ ಮತ್ತು ದೇಶೀಯ ಜ್ಞಾನ, ವ್ಯಾವಹಾರಿಕ ತಾಂತ್ರಿಕತೆ ಹಾಗೇ ಸ್ಥಳೀಯ ಸಂಸ್ಥೆಗಳ ಆಧಾರಿತ ಅಭಿವೃದ್ಧಿ ಇವೇ ತಮ್ಮ ಮೂಲ ಆಶಯಗಳು ಎಂಬುದಾಗಿ ತೀರ್ಪುಗಾರರು ಸ್ಪಷ್ಟಪಡಿಸಿರುವರು.

ತೀವ್ರ ವಿರೋಧ: ಕೃಷಿಯನ್ನು ಜೀವನಾಧಾರವಾಗಿ ಸಂಬಿರುವ ಜನ ಸಂಖ್ಯೆಯನ್ನು ಶೇ.70ರಿಂದ ಶೇ.40ಕ್ಕೆ ಇಳಿಸುವ ಆಂಧ್ರ ಸರ್ಕಾರದ ಯೋಜನೆಯನ್ನು ತೀರ್ಪುಗಾರ ಮಂಡಳಿ ಸಾರಾಸಗುಟು ತಿರಸ್ಕರಿಸುತ್ತದೆ. ಈ ಹಿನ್ನಲೆಯಲ್ಲಿ ರೈತರನ್ನು ಒಕ್ಕಲೆಬ್ಬಿಸಲು ಹಮ್ಮಿಕೊಂಡಿರುವ ಭೂ ಕ್ರೂಡೀಕರಣ, ಒಪ್ಪಂದ ಕೃಷಿ (Contact farming), ಶ್ರಮವನ್ನು ಪಲ್ಲಟಗೊಳಿಸುವ ಕೃಷಿ ಯಾಂತ್ರೀಕರಣ, ಬಿ.ಟಿ. ಹತ್ತಿ, ವಿಟಮಿನ್‌ಯುಕ್ತ ಅಕ್ಕಿ ಮೊದಲಾದ ಜೈವಿಕ ತಂತ್ರಜ್ಞಾನದ ಮೂಲಕ ವಿಕೃತಗೊಳಿಸಿದ ಬೆಳೆಗಳನ್ನು, ಹಾಗೇ ರಫ್ತು ಮಾಡುವ ನೆಪದಲ್ಲಿ ಔಷಧಿ ಸಸ್ಯಗಳ ಮೇಲಿನ ನಮ್ಮ ಹತೋಟಿಯನ್ನು ಮೊಟಕುಗೊಳಿಸುವ ಪ್ರಯತ್ನಕ್ಕೆ ತೀರ್ಪುಗಾರರ ತೀವ್ರ ವಿರೋಧ ವ್ಯಕ್ತವಾಗಿರುತ್ತದೆ.

ಇದಲ್ಲದೇ, ಸಂಪನ್ಮೂಲಗಳ ಬಳಕೆ ಮತ್ತು ಹತೋಟಿ, ಕೃಷಿ ಮತ್ತು ಆಹಾರ ವ್ಯವಸ್ಥೆ, ವಿಜ್ಞಾನ-ತಂತ್ರಜ್ಞಾನ, ರೈತರಿಗೆ ರಕ್ಷಣೆ ಮತ್ತು ಬೆಂಬಲ ವಿಧಾನಗಳು, ಸ್ವಾವಲಂಬನೆ ಮತ್ತು ಸ್ಥಳೀಯವಾಗಿ ವಿಕೇಂದ್ರಿಕೃತ ನಿರ್ಣಯ ಕೈಗೊಳ್ಳಲು ಪೂರಕವಾಗಿರುವ ಸಂಸ್ಥೆಗಳು, ಪರಿಸರ, ಆರೋಗ್ಯ, ಸಂಸ್ಕೃತಿ ಹಾಗೇ ಸರ್ಕಾರದ ಪಾತ್ರಗಳಂತಹ ಗಂಭೀರ ವಿಚಾರಗಳ ಬಗ್ಗೆ ವಿವರವಾದ ತೀರ್ಪುಗಳು ಹೊರಬಿದ್ದಿವೆ. ಅವುಗಳಲ್ಲಿ ಮುಖ್ಯವಾದವುವೆಂದರೆ:

1. ರೈತರಿಗೆ ಭೂಮಿಯ ಮೇಲಿನ ಪಟ್ಟ ಮತ್ತು ಅರಣ್ಯದ ಮೇಲಿನ ಹಕ್ಕನ್ನು ನೀಡುವುದು.
2. ಸಣ್ಣ ರೈತರಿಗೆ ಅನುಕೂಲವಾಗುವಂತೆ ಕೊಳವೆ ಬಾವಿಗಳನ್ನು ತೋಡಿ ಸಾಮೂಹಿಕ ನಿರ್ವಹಣೆಗೆ ಅನುವು ಮಾಡಿಕೊಡುವುದು.
3. ರೈತರು ಸಂಗ್ರಹಿಸಿಟ್ಟು ಕೊಂಡಿರುವ ಬೀಜದ ಪುನರ್ ಬಳಕೆಯ ಹಕ್ಕನ್ನು ಎತ್ತಿ ಹಿಡಿಯುವುದು.
4. ಕೆರೆಗಳನ್ನು ಪುನ: ಚೇತನಗೊಳಿಸಿ ದೇಶೀಯ ಪದ್ಧತಿಗಳ ಮೂಲಕ ನೀರು ನಿರ್ವಹಣೆ ಮಾಡುವಂತಹ ವ್ಯವಸ್ಥೆಯನ್ನು ಹುಟ್ಟುಹಾಕುವುದು.
5. ಸಾಲರಹಿತ ಕೃಷಿ ಪದ್ಧತಿಯ ನಿರ್ಮಾಣ ಮಾಡುವುದು.
6. ಸಾವಯವ ಕೃಷಿ ಪದ್ಧತಿ ಮತ್ತು ಬಂಡವಾಳ ಹೂಡಿಕೆಗಳಿಗೆ ರಿಯಾಯ್ತಿ ನೀಡುವುದು.
7. ಸಮುದಾಯ ಮಟ್ಟದಲ್ಲಿ ಒಗ್ಗೂಡಿ ಬೆಳೆಯೋಜನೆಯನ್ನು ನಿರ್ಮಿಸುವ ವ್ಯವಸ್ಥೆಗೆ ಪ್ರೋತ್ಸಾಹ ನೀಡುವುದು.
8. ಕೃಷಿ ಉತ್ಪನ್ನಗಳ ಬೆಲೆ, ಮಾರುಕಟ್ಟೆ ಮತ್ತು ಮಾರಾಟ ಕ್ರಿಯೆಯಲ್ಲಿ ಸ್ಥಳೀಯ ನಿರ್ವಹಣೆ, ಸ್ಥಳೀಯರ ಪಾತ್ರ ಮತ್ತು ಹತೋಟಿಗಳನ್ನು ಹೆಚ್ಚಿಸುವುದು.

ಇನ್ನು ಸರ್ಕಾರ, ಜನರಿಗೆ ಕುಡಿಯುವ ನೀರು ಒದಗಿಸುವಂತಹಾ ಮೂಲಭೂತ ಅಗತ್ಯಗಳನ್ನು ಪೂರೈಸುವಲ್ಲಿ, ಬೆಲೆಗಳ ಮೇಲೆ ನಿಗಾ ಇಡುವಲ್ಲಿ, ಕೃಷಿಕರ ಜೀವ ಹಾನಿಯಾದಾಗ ಪರಿಹಾರ ಕೊಡುವಾಗ, ಬಡ ರೈತರು ಮತ್ತು ಭೂಹೀನ ಕಾರ್ಮಿಕರಿಗೆ ಸಾಲ ಸೌಲಭ್ಯ ನೀಡುವಾಗ ಹಾಗೇ ದೋಷಪೂರಿತ ಕ್ರಿಮಿಕೀಟನಾಶಕಗಳನ್ನು ನಿರ್ಬಂಧಿಸುವ ಸಂದರ್ಭಗಳಲ್ಲಿ ವಿಶೇಷ ಜವಾಬ್ದಾರಿಯನ್ನು ಹೊರಬೇಕೆಂದು ಈ ತೀರ್ಪಿನಲ್ಲಿ ಒತ್ತಾಯಿಸಲಾಗಿದೆ. ಜೊತೆಗೆ, ಹೊರದೇಶಗಳಿಂದ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿ ಧನ ಸಹಾಯ ಪಡೆಯುವಾಗ ಅವರ ಸಹಾಯ ಈ ಮೇಲ್ಕಾಣಿಸಿದ ದೃಷ್ಟಿ ಕೋನಕ್ಕೆ ಪೂರಕವಾಗಿರಬೇಕೆಂದೂ ಒತ್ತಿ ಹೇಳಲಾಗಿದೆ. ಇಡೀ ದೇಶದಲ್ಲೇ ಪ್ರಥಮ ಎನ್ನಬಹುದಾದ ಆಂಧ್ರದ ಬಡರೈತರು ನೀಡಿರುವ ಈ ಪ್ರಜಾತೀರ್ಪು ಅತ್ಯಂತ ಮಹತ್ವವೂ ಸಹಾರಿಕವೂ ಎಂದರೆ ತಪ್ಪಾಗಲಾರದು.

ಅನುಭವಿ ಅನ್ವೇಷಕರಾದ ತುಮಕೂರಿನ ಸದಾಶಿವಯ್ಯನವರು

ತುಮಕೂರಿನ ಹಿರಿಯ ರೈತ ಸದಾಶಿವಯ್ಯನವರು ಟ್ರ್ಯಾಕ್ಟರ್ ಚಾಲಿತ ಟ್ರೆಂಚರ್ ಒಂದನ್ನು ಆವಿಷ್ಕರಿಸಿದ್ದಾರೆ. ಇದನ್ನು ಪರಿಣಿತರು ಹಾಗೂ ತಂತ್ರಜ್ಞರು ಪ್ರಾತ್ಯಕ್ಷತೆಗೊಳಪಡಿಸಿ, ಅಮೂಲ್ಯ ಅನುಶೋಧನೆ ಎಂದು ದೃಢಪಡಿಸಿರುವರು. ಈ ಟ್ರ್ಯಾಕ್ಟರ್ ಚಾಲಿತ ಟ್ರೆಂಚರ್‌ನಲ್ಲಿ ಕೆಲಸ ಮಾಡುವುದರಿಂದ ಮಾನವ ಶ್ರಮ, ಸಮಯ, ಧನ ಅಧಿಕ ಉಳಿತಾಯವಾಗುವುದೆಂದು ದೃಢೀಕರಿಸಿದ್ದಾರೆ. ರಾಜ್ಯ ಸರ್ಕಾರ ಈ ಯಂತ್ರ ಕೊಳ್ಳಲು ಶೇಕಡ 50ರ ಸಹಾಯ ಧನವನ್ನು ಸಹ ನೀಡಲು ಮುಂದಾಗಿರುವುದಾಗಿ ತಿಳಿದು ಬಂದಿದೆ.

ಈ ಟ್ರೆಂಚರ್‌ನ್ನು ಹೊಲ, ಗದ್ದೆ, ತೋಟ ಮತ್ತು ಕಾಲುವೆ ಅಥವಾ ಕಂದಕಗಳಲ್ಲಿ ನೆಲ ತೋಡುವ ಕೃಷಿ ಉಪಕರಣವಾಗಿ ಕಡಿಮೆ ಸಮಯ, ಕಡಿಮೆ ದೈಹಿಕ ಶ್ರಮದಲ್ಲಿ ಉಪಯೋಗಿಸಬಹುದಾಗಿದೆ. ಕೃಷಿ ಚಟುವಟಿಕೆಗಳಲ್ಲಿ ಒಂದು ಕಿ.ಮೀ. ಕಾಲುವೆ ತೋಡಲು 100 ಜನ ಕೂಲಿಯಾಳುಗಳಿಗೆ ಒಂದು ದಿನ ಬೇಕಾಗುತ್ತದೆ ಹಾಗೂ 5000=00 ರೂಪಾಯಿಗಳವರೆಗೆ ವೆಚ್ಚವಾಗುತ್ತದೆ ಎಂದು ಕೃಷಿ ತಜ್ಞರು ಹೇಳುತ್ತಾರೆ. ಆದರೆ ಈ ಟ್ರೆಂಚರ್ ಉಪಯೋಗಿಸಿ ಕೇವಲ 2 ಗಂಟೆ ಅವಧಿಯಲ್ಲಿ 250=00 ರೂಪಾಯಿ ವೆಚ್ಚದಲ್ಲಿ ಒಂದು ಕಿ.ಮೀ. ಕಾಲುವೆಯನ್ನು ಕೆಲಸಗಾರನಿಗಿಂತ ಉತ್ತಮವಾಗಿ ತೋಡ ಬಹುದು.

ಇದು ಕೃಷಿ, ಒಣ ಬೇಸಾಯ, ಬಂಜರು ಭೂಮಿ, ತೋಟಗಾರಿಕೆ ಮತ್ತು ಅರಣ್ಯ ಪ್ರದೇಶಗಳಲ್ಲಿ ಕಾಲುವೆ ತೋಡಲು ಅತ್ಯುತ್ತಮವಾದುದೆಂದು ಈ ಎಲ್ಲಾ ಕೃಷಿ ಸಂಬಂಧಿತ ಸಂಸ್ಥೆಗಳ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ತೋಟಗಳಲ್ಲಿ ಶಿಫಾರಸ್ಸು ಮಾಡುವ ಅಂತರದಲ್ಲಿ ಟ್ರೆಂಚ್ ತೆಗೆದು ಅದರಲ್ಲಿ ಗಿಡಗಳನ್ನು ನೆಡಲು ಬಳಸಬಹುದು. ಉದಾಹರಣೆಗೆ ಪರಂಗಿ, ಬಾಳೆ, ಸೀಬೆ, ಸಪೋಟ, ನಿಂಬೆ, ಕರಿಬೇವು, ಮಾವು, ಅಡಿಕೆ ಇತ್ಯಾದಿ ಗಿಡಗಳನ್ನು ಈ ಟ್ರೆಂಚರ್ ಸಹಾಯದಿಂದ ಸುಲಭವಾಗಿ ನೆಡಬಹುದು.

ಇದನ್ನು ಹನಿ ನೀರಾವರಿ ವ್ಯವಸ್ಥೆಗಾಗಿ ಕಾಲುವೆ ತೆಗೆಯಲು, ಕಬ್ಬು ನಾಟಿ ಮಾಡಲು , ಬೇಲಿ ಹಾಕಲು, ಗೂಟಗಳನ್ನು ನೆಡಲು, ಜೌಗು ಭೂಮಿಯಲ್ಲಿ ಬಸಿ ಕಾಲುವೆಯನ್ನು ನಿರ್ಮಿಸಲು, ಗಟ್ಟಿಯಾದ ಭೂಮಿಯಲ್ಲಿ ಕೆಳಪದರಗಳನ್ನು ಸಡಿಲಗೊಳಿಸಲು ಬಳಸಬಹುದು. ಇದರಿಂದ ಗರಿಕೆ ಭೂಮಿಯಲ್ಲಿ ಆಳವಾಗಿ ಉಳುಮೆ ಮಾಡಿ ಹುಲ್ಲಿನ ಗೆಡ್ಡೆಗಳನ್ನು ಸುಲಭವಾಗಿ ತೆಗೆಯಬಹುದು.

ಸಾಮಾಜಿಕ ಅರಣ್ಯ ಕಾರ್ಯಕ್ರಮದಲ್ಲಿ ಗಿಡಗಳನ್ನು ನೆಡುವುದಕ್ಕೆ, ಒಣ ಬೇಸಾಯದಲ್ಲಿ ನೀರಿನ ಸಂರಕ್ಷಣೆಗಾಗಿ, ಇಳಿಜಾರಿಗೆ ಅಡ್ಡಲಾಗಿ ಬದು ಹಾಕಲು ಅಥವಾ ಕಾಲುವೆ ತೆಗೆಯಲು ಈ ಟ್ರೆಂಚರ್ ಅತ್ಯುತ್ತಮವಾದುದು. ಗ್ರಾಮೀಣ ರಸ್ತೆಗಳಲ್ಲಿ ರಸ್ತೆ ಪಕ್ಕ ಕಾಲುವೆ ತೆಗೆಯಲು, ಉಪಯುಕ್ತ ದಿಂಡು ಸಾಲು ಕಟ್ಟಲು, ಇನ್ನೂ ಹತ್ತಾರು ಕೃಷಿ ಕೆಲಸಗಳಿಗೆ ಉಪಯುಕ್ತವಾಗಿದೆ. ಕೃಷಿಯನ್ನು ಹೆಚ್ಚು ಲಾಭಕರವಾಗಿ ಮಾಡಲಿಕ್ಕೆ ಇದು ಸಹಕಾರಿ.

ಈ ಟ್ರೆಂಚರಿನಿಂದ ಗಡಸು, ಮಧ್ಯಮ ತರಹ ಮತ್ತು ಮೆದು ಭೂಮಿಗಳಲ್ಲಿ ಮುನ್ನೂರ ಅರವತ್ತೈದು ದಿನಗಳಲ್ಲೂ ಟ್ರೆಂಚ್ ಮಾಡಬಹುದು. ಆದರೆ ಒಂದು ಮುಖ್ಯವಾದ ವಿಷಯವೇನೆಂದರೆ ಟ್ರೆಂಚ್ ಮಾಡುವಾಗ ಉಳುಮೆ ಮಾಡುವ ಹದವಿರಬೇಕು. ಟ್ರೆಂಚ್ ಮಾಡಿದ ಸಾಲಿನ ಮೇಲೆ ಮತ್ತೆ ಮತ್ತೆ ಟ್ರೆಂಚ್ ಮಾಡಿದರೆ ಇನ್ನೂ ಅಚ್ಚುಕಟ್ಟಾಗಿ ಮತ್ತು ಆಳವಾದ ಟ್ರೆಂಚ್ ಮಾಡಬಹುದು ಹಾಗೂ ಕೊನೆಗೆ ವೇಗವಾಗಿ ಟ್ರ್ಯಾಕ್ಟರ್ ಓಡಿಸಿದರೆ ಒಳಗೆ ಬಿದ್ದಿರುವ ಮಣ್ಣೆಲ್ಲ ಮೇಲೆ ಬರುತ್ತದೆ.

ಇಂತಹಾ ಅನನ್ಯ ಉಪಯುಕ್ತ ಕೃಷಿಯಂತ್ರವನ್ನು ಆವಿಷ್ಕರಿಸಿ ಹಲವಾರು ವರ್ಷಗಳೇ ಕಳೆದಿದ್ದರೂ, ಸರ್ಕಾರದಿಂದ ಅಗತ್ಯ ನೆರವು, ಪ್ರೋತ್ಸಾಹಗಳಿಗೆ ಅಲೆದು ಸದಾಶಿವಯ್ಯನವರು ಸುಸ್ತಾಗಿರುವರು.

ಜಲಮಾನವ ರಾಜೇಂದ್ರಸಿಂಗ್ !

ನಲವತ್ತೆರಡು ವರ್ಷದ ರಾಜೇಂದ್ರಸಿಂಗ್ ರವರು ರಾಜಸ್ಥಾನದ ಲಿಕಾಂಪುರ ಗ್ರಾಮದ ತರುಣ, ಆಶ್ರಮದಲ್ಲಿ ವಾಸಿಸುತ್ತಾರೆ. ಅವರ ಹೆಂಡತಿ ಹಾಗೂ ಮಕ್ಕಳು ಜೈಪುರದಲ್ಲಿ ಇರುವರು. ಸರಳ ವೇಷಭೂಷಣದೊಂದಿಗೆ ಸುಲಲಿತವಾಗಿ ಹಿಂದಿಯನ್ನು ಮಾತನಾಡುವ ಇವರನ್ನು ನೋಡಿದರೆ, ಮೊದಲಿಗೆ ಸನ್ಯಾಸಿಯೆಂದೆನಿಸುತ್ತದೆ. ರಾಜೇಂದ್ರಸಿಂಗ್ ರವರು 'ತರುಣ ಭಾರತ ಸಂಘ' ಎಂಬ ಸರ್ಕಾರೇತರ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಈ ಸಂಸ್ಥೆಯು ರಾಜಸ್ಥಾನದ ಹಾಗೂ ಸುತ್ತಮುತ್ತಲ ರಾಜ್ಯಗಳ ಸಾವಿರಾರು ಜನರ ಜೀವನದ ರೀತಿಯನ್ನೇ ಬದಲಾಯಿಸಿದೆ.

ಕಳೆದ 15 ವರ್ಷಗಳಲ್ಲಿ ಸಿಂಗ್ ಹಾಗೂ ಅವರ ತಂಡದವರ ಅವಿರತ ಶ್ರಮದಿಂದಾಗಿ 6500 ಕಿ.ಮೀ.ಗಳಲ್ಲಿ ವ್ಯಾಪಿಸಿದ್ದ 750 ಹಳ್ಳಿಗಳು ಅಂತರ್ಜಲ ತೀವ್ರವಾಗಿ ಕೆಳಗಿಳಿದ "ಕಪ್ಪುಪಟ್ಟಿ"ಯಿಂದ ಅಂತರ್ಜಲ ಉತ್ತಮಗೊಂಡ "ಶ್ವೇತಪಟ್ಟಿ"ಗೆ ಸೇರುವಂತಾಗಿದೆ.

ಆ ಪ್ರದೇಶಗಳಲ್ಲಿ ಸಿಂಗ್ ರವರು ಇತರರಿಗೆ ಮಾದರಿಯಾಗಿದ್ದಾರೆ. ಅವರು 23 ವರ್ಷದವರಾಗಿದ್ದಾಗ ಭಾರತ ಸರ್ಕಾರದಲ್ಲಿ ಪ್ರಾಜೆಕ್ಟ್ ಕೋಆರ್ಡಿನೇಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ರಾಜಸ್ಥಾನದ ಜನರ ಅದೃಷ್ಟವೆಂಬಂತೆ ಅವರು ಈ ಸರ್ಕಾರಿ ಸೇವೆಯಿಂದ ಬೇಗನೆ ನಿರ್ಗಮಿಸಿದರು. ಜನರಿಗೆ ಉಪಯುಕ್ತವಾದ ಕೆಲಸ ಮಾಡಬೇಕೆನ್ನುವ ಯೋಚನೆಯಲ್ಲಿದ್ದ ಅವರು ಅಲ್ವರ್‌ನಲ್ಲಿ ಒಬ್ಬ ಆದಿವಾಸಿ ಮನುಪಟೇಲ್ ರವರನ್ನು ಭೇಟಿಯಾದರು. ಈ ಆದಿವಾಸಿ "ನೀನು ನಿಜವಾಗಿಯೂ ಏನಾದರೂ ಮಾಡಬೇಕೆಂದಿದ್ದರೆ ನಾಳೆ ಗುದ್ದಲಿಯೊಂದಿಗೆ ನನ್ನ ಬಳಿ ಬಾ ಎಂದರಂತೆ". ಇದು ರಾಜೇಂದ್ರಸಿಂಗ್ ರ ಜೀವನದಲ್ಲಿ ಒಂದು ಮಹತ್ತರ ತಿರುವಾಯಿತು. ಅವರು ಅಗತ್ಯ ಸಲಕರಣೆಗಳೊಡನೆ 6 ತಿಂಗಳಿಗೂ ಹೆಚ್ಚು ಕಾಲ ಸ್ವತ: ಕಷ್ಟಪಟ್ಟು ದುಡಿಮೆ ಮಾಡಿದರು.

ತದನಂತರ, ಸಿಂಗ್ ಹಾಗೂ ಗ್ರಾಮೀಣ ಪ್ರದೇಶದ ಜನರು ಕೆರೆ, ಅಣೆಕಟ್ಟುಗಳನ್ನು ಕೂಡ ನಿರ್ಮಿಸಿದ್ದಾರೆ. ಇದರಿಂದ ದಶಮಾನಗಳ ಕಾಲ ಬರಪೀಡಿತ

ವಾಗಿದ್ದ ಪ್ರದೇಶಗಳಲ್ಲಿ ಈಗ ನೀರಾವರಿಯ ವ್ಯವಸ್ಥೆಯಾಗಿದೆ.

ಗೋಪಾಲಪುರದಲ್ಲಿ ತಮ್ಮ ಮೊದಲ ಕಾರ್ಯದಲ್ಲಿ ಯಶಸ್ವಿಯಾದ ನಂತರ, ಸಿಂಗ್ ಹಾಗೂ ತಂಡದವರು ತಮ್ಮ ಯಶಸ್ಸಿನ ಕಾರ್ಯವನ್ನು ಸುತ್ತಮುತ್ತಲ ಪ್ರದೇಶಗಳಲ್ಲಿಯೂ ಮುಂದುವರೆಸಿದರು. ಅವರ ಒಂದೇ ನಿಬಂಧನೆಯೆಂದರೆ ಇವರು ಹಾಕುವ ಶ್ರಮ, ಹಣಗಳಲ್ಲಿ ಕನಿಷ್ಠ ಕಾಲು ಭಾಗವಾದರೂ ಹಳ್ಳಿಯವರ ಸಹಕಾರವಿರಬೇಕು ಎಂಬುದಾಗಿದೆ.

ಇದುವರೆಗೂ ಸಿಂಗ್ ಹಾಗೂ ತಂಡದವರು ರಾಜಸ್ಥಾನದ ಆ ಪ್ರಾಂತ್ಯದಲ್ಲಿ ಸುಮಾರು 4,500 ಕೆರೆಗಳನ್ನು ನಿರ್ಮಿಸಿದ್ದಾರೆ. ಸಿಂಗ್ ರವರು ಈ ಯಶಸ್ಸನ್ನೆಲ್ಲಾ ಹಳ್ಳಿಯ ಜನರಿಗೇ ಸಲ್ಲಿಸುತ್ತಾರೆ. 'ಈ ಪ್ರದೇಶದ ಐದು ನದಿಗಳು ಈಗ ಜೀವನದಿಗಳಾಗಿವೆ. ಕಳೆದ 5 ವರ್ಷಗಳಿಂದ ಬರಗಾಲವಿದ್ದರೂ ಈ ನದಿಗಳಲ್ಲಿ ನೀರು ಮಾತ್ರ ಬತ್ತಿಲ್ಲ' ಎನ್ನುತ್ತಾರೆ ಸಿಂಗ್.

ಸಿಂಗ್ ರವರ ಪ್ರಕಾರ, ಯಾರಾದರೂ ಸ್ವಾಭಾವಿಕ ಪರಿಸರ ಸಮತೋಲನದ ಬಗ್ಗೆ ತಿಳಿದುಕೊಳ್ಳಬೇಕೆಂದರೆ, ಅವರು ಹಳ್ಳಿಯವರಿಂದ ಸಲಹೆಗಳನ್ನು ಪಡೆಯಬೇಕು. ಭಾವ್ಕದ ಜನರು ತಾವಾಗಿಯೇ 1200 ಎಕರೆ ಪರ್ವತ ಪ್ರದೇಶವನ್ನು ಸ್ವಾಭಾವಿಕವಾಗಿ ಪ್ರಕೃತಿಯ ಅಧೀನವಾಗಿಸಿದರು. ಈಗ ಅಲ್ಲಿ ಗಿಡ, ಮರ, ಹುಲಿ, ಚಿರತೆಗಳನ್ನು ಕಾಣಬಹುದು. ಇವರು ವನ್ಯಜೀವಿ ಧಾಮವನ್ನು ನಿರ್ಮಿಸಿದ ಹಳ್ಳಿಗರಲ್ಲಿ ಮೊದಲಿಗರು. ಅವರದನ್ನು ಭೈರೋದೇವ ಲೋಕವನ್ಯ ಜೀವಿ ಅಭಯಾರಣ್ಯ ಎನ್ನುತ್ತಾರೆ. ಈ ಹಳ್ಳಿಗರು ಪ್ರಕೃತಿಯಲ್ಲಿ ಸಮತೋಲನವನ್ನು ಕಾಪಾಡಲು ಶ್ರಮಿಸುತ್ತಿದ್ದಾರೆ. ಆದರೆ ನಮ್ಮ ಸರ್ಕಾರ ಇಂತಹ ಹಳ್ಳಿಗರನ್ನೇ ಯೋಜನೆಗಳಿಂದ ಹೊರಗಿಟ್ಟು ದೂರ ಮಾಡುವುದು ವಿಷಾದಕರ ಎನ್ನುತ್ತಾರೆ ಸಿಂಗ್.

ಸ್ವಾತಂತ್ರ್ಯ ನಂತರ ಬರಪರಿಹಾರಕ್ಕೆಂದೇ ಸರ್ಕಾರ 1900 ಕೋಟಿ ರೂಪಾಯಿ ವೆಚ್ಚ ಮಾಡಿದೆ. ಇಷ್ಟಾದರೂ ರಾಜಸ್ಥಾನದ ಸರ್ಕಾರಕ್ಕೆ ಒಂದೇ ಒಂದು ಹಳ್ಳಿಯನ್ನೂ ಬರಮುಕ್ತ ಮಾಡಲು ಸಾಧ್ಯವಾಗಿಲ್ಲ. ಸರ್ಕಾರದ ಹಣದ ನೆರವಿಲ್ಲದೆಯೂ, ಹಳ್ಳಿಗರ ಮನವೊಲಿಸಿ ಅವರ ಸಹಕಾರದಿಂದ ತಾವೀಗ 90 ಹಳ್ಳಿಗಳನ್ನು ಬರದ ಕಪಿಮುಷ್ಠಿಯಿಂದ ತಪ್ಪಿಸಿದ್ದೇವೆ ಎಂದು ಉತ್ಪ್ರೇಕ್ಷೆಯಿಲ್ಲದೇ ಹೇಳುತ್ತಾ ಸರ್ಕಾರವೇಕೆ ಈ ರೀತಿಯ ಸಹಕಾರ ಯೋಜನೆಗಳನ್ನು ಯಶಸ್ವಿಯಾಗಿ ನಡೆಸುತ್ತಿಲ್ಲ ಎಂದು ಪ್ರಶ್ನಿಸುತ್ತಾರೆ ಈ ಜಲಮಾನವ.

ನೀರಿನ ಮೂಲಗಳ ಖಾಸಗೀಕರಣಕ್ಕೂ ವಿರುದ್ಧವಾಗಿರುವ ಸಿಂಗ್ ರವರು ಸರ್ಕಾರವು ಬಹು ರಾಷ್ಟ್ರೀಯ ಸಂಸ್ಥೆಗಳಿಗೆ, ದಿನ ನಿತ್ಯದ ನೀರು ಸರಬರಾಜಿಗೆ ಹಣವನ್ನು ನೀಡುತ್ತಿದೆ, ಅದರ ಬದಲು ಎಲ್ಲರೂ ಅತ್ಯುತ್ತಮ ಜಲ ನಿರ್ವಹಣೆಗೆ ಏಕೆ ಕಾರ್ಯ ಮಗ್ನರಾಗಬಾರದೆಂದು ಪ್ರಶ್ನಿಸುತ್ತಾರೆ.

ನೀರು ನಿರ್ವಹಣೆಗೆ ಆದಷ್ಟು ಬೇಗ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳದಿದ್ದಲ್ಲಿ ಅತ್ಯಂತ ಅಲ್ಪ ಸಮಯದಲ್ಲಿಯೇ ಜಗತ್ತು ಭೀಕರ ನೀರಿನ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ ಎಂದು ಜಲವನ್ನು ತನ್ನ ಜೀವನವಾಗಿಸಿಕೊಂಡಂತಹ ಈ ಜಲ ಮಾನವ ಹೇಳುತ್ತಾರೆ. ಅದಿಲ್ಲದಿದ್ದಲ್ಲಿ ಮುಂದಿನ ಯುದ್ಧ ನೀರಿಗಾಗಿಯೇ, ಅದಕ್ಕಾಗಿ ನಾವು ತಯಾರಾಗುವುದು ಅನಿವಾರ್ಯ ಎಂಬುದು ಸಿಂಗರವರ ವಾದ. ರಾಜೇಂದ್ರಸಿಂಗರ ಈ ಮಹತ್ತರ ಸಾಧನೆಗಾಗಿ ಅವರಿಗೆ ಈ ಸಾರಿಯ ಫಿಲಪೈನ್ ಮೂಲದ ಮ್ಯಾಗಸೇಸ್ ಪ್ರತಿಷ್ಠಿತ ಪ್ರಶಸ್ತಿ ದೊರೆತಿರುತ್ತದೆ. ನೆಲ, ಜಲ, ಅರಣ್ಯ ಒಟ್ಟಾರೆ ಪರಿಸರ ಸಂರಕ್ಷಣೆಯಲ್ಲಿ ಜನರನ್ನು ಸಂಪೂರ್ಣ ಬಳಸಿ ಆ ಮೂಲಕ ಪರ್ಯಾಯ ಅಭಿವೃದ್ಧಿ ಮಾದರಿಯನ್ನು ಶ್ರೀ.ರಾಜೇಂದ್ರಸಿಂಗ್ ಸಾಕಾರ ಗೊಳಿಸಿರುವುದರ ಬಗ್ಗೆ ಎರಡು ಮಾತಿರದು.

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಮಟ್ಟದ ಪ್ರಥಮ ಸ್ಪರ್ಧೆಯ ಫಲಿತಾಂಶ
ಕರ್ನಾಟಕದಿಂದ ಬಹುಮಾನ ವಿಜೇತರು

ವ್ಯಕ್ತಿ ಮತ್ತು ವಿಳಾಸ	ವಿಭಾಗ	ಶೋಧನೆ	ಬಹುಮಾನ	ಮೊತ್ತ (ರೂ.)
೧. ಶ್ರೀ ನರಸಿಂಹ ಭಂಡಾರಿ, ಕೊಪ್ಪ	ಕೃಷಿ ಯಂತ್ರ	ಅಡಿಕೆ ಸುಲಿಯುವ ಯಂತ್ರ	ಪ್ರಥಮ	1,00, 000
೨. ಶ್ರೀ ಅಣ್ಣಾ ಸಾಹೇಬ್ ಉದ್ಗಾವಿ, ಬೆಳಗಾಂ	ಕೃಷಿ ಯಂತ್ರ,	ಚಂದ್ರಪ್ರಭಾ ನೀರು ಗನ್ನು	ತೃತೀಯ	25,000
೩. ಶ್ರೀ ಶಿವಕುಮಾರ್ ಎ.ಆರ್. ಬೆಂಗಳೂರು	ಇಂಧನ ಉಳಿತಾಯ	ವಿದ್ಯುತ್ ನೀರು ಕಾಯಿಸುವ ಯಂತ್ರ	ತೃತೀಯ	25,000
೪. ಶ್ರೀ ಸುದರ್ಶನ, ಪುತ್ತೂರು	ವಿನೂತನ ಆಲೋಚನೆ	ಹೊಸ ಹೊಸ ಯೋಚನೆ ನೀಡುವ ವ್ಯಕ್ತಿ	ಪ್ರಥಮ	50,000
೫. ಶ್ರೀ ನಾಗೇಂದ್ರಪ್ಪ, ಬೆಂಗಳೂರು	ವಿನೂತನ ಆಲೋಚನೆ	ರಾಷ್ಟ್ರೀಯ ಹೆದ್ದಾರಿ ಮತ್ತು ರೈಲ್ವೆಗಳಲ್ಲಿ ವಿದ್ಯುಚ್ಛಕ್ತಿ ನಿರ್ವಹಣೆ	ತೃತೀಯ	15,000
೬. ಶ್ರೀ ಅಬ್ದುಲ್ ಖಾದರ್ ನಡಕಟ್ಟನ್, ಅಣ್ಣಿಗೇರಿ	ರಾಜ್ಯಮಟ್ಟದ ಪ್ರಶಸ್ತಿ	ಹುಣಸೆ ಕೃಷಿ ಶೋಧನೆಗಳು	ಪ್ರಥಮ	25,000
೭. ಡಾ. ಟಿ. ಎನ್. ಪ್ರಕಾಶ್, ಹಿತ್ತಲಗಿಡ ಬಳಗ, ಬೆಂಗಳೂರು	ಸಂಸ್ಥೆ / ವ್ಯಕ್ತಿ	ಶೋಧಕರನ್ನು ಗುರುತಿಸಿರುವುದಕ್ಕೆ	ತೃತೀಯ	15,000
೮. ಶ್ರೀ ಕೃಷ್ಣಮೂರ್ತಿ, ಎನ್., ಬೆಂಗಳೂರು	ಗೃಹೋಪಯೋಗಿ	ಬಾಗಿಲಿಗೆ ಬೀಗ ಹಾಕುವ ಯಂತ್ರ	ಸಮಾಧಾನಕರ	1,000
೯. ಶ್ರೀ ಕಪ್ಪಣ್ಣಗೌಡರ್, ಮೈಸೂರು	ಕೃಷಿ ಯಂತ್ರ	ಎತ್ತಿನ ಗಾಡಿ	ಸಮಾಧಾನಕರ	1,000
೧೦. ಶ್ರೀ ಕೃಷ್ಣಪ್ರಸಾದ್, ಪಿ.ಆರ್., ಮೈಸೂರು	ತಳಿ	ಬಹುವಾರ್ಷಿಕ ಬದನೆ ತಳಿ	ಸಮಾಧಾನಕರ	1,000
೧೧. ಶ್ರೀ ದಿನೇಶ್ ಬಿ. ಎಸ್., ಶಿವಮೊಗ್ಗ	ಕೃಷಿ ವಿಧಾನ	ಮುಕ್ಕಡಕ ಕೀಟನಾಶಕ	ಸಮಾಧಾನಕರ	1,000
೧೨. ಶ್ರೀ ಬಸವರಾಜ ಸಂತೇಶಿವರ, ಹಾಸನ	ಕೃಷಿ ವಿಧಾನ	ಭತ್ತದಲ್ಲಿ ಜೈವಿಕ ಕೀಟ ಹತೋಟಿ	ಸಮಾಧಾನಕರ	1,000

ನೀರಾವರಿ ಮಾಡುವುದು ಯಾವಾಗ ?

ವಾರಕ್ಕೆ ಅದೆಷ್ಟು ಸಾರಿ ಗಿಡಗಳಿಗೆ ನೀರು ಹಾಯಿಸಬೇಕು ? ನೀರಿನ ಬವಣೆ, ದಿನದಿಂದ ದಿನಕ್ಕೆ ಇಳಿಯುತ್ತಿರುವ ಅಂತರ್ಜಲ, ನೀರು ಹಾಯಿಸದಿದ್ದರೆ ಬಾಡಿ, ಸಾಯುವ ಗಿಡಗಳು, ಒಟ್ಟಾರೆ, ನೀರನ್ನು ಅತೀ ಜಾಗ್ರತೆಯಲ್ಲಿ ಬಳಸುವುದು ಅತ್ಯಗತ್ಯ. ಯಾವಾಗ ನೀರು ಹಾಯಿಸಬೇಕು ಎಂದು ತಿಳಿಯಲು ಪಾಂಡಿಚೇರಿಯ ರೈತರು ಕಂಡುಕೊಂಡ ಸುಲಭ ವಿಧಾನ ಹೀಗಿದೆ.



ಯಾವುದೇ ಬೆಳೆ ಬೆಳೆಸುವಾಗ ಜೊತೆಯಲ್ಲೇ ಒಂದೆರಡು ಸೂರ್ಯಕಾಂತಿಯ ಬೀಜಗಳನ್ನೂ ಬಿತ್ತುತ್ತಾರೆ. ಸೂರ್ಯಕಾಂತಿ ಗಿಡ ನೀರಿನ ಏರುಪೇರಿಗೆ ಬೇಗ ಪ್ರತಿಕ್ರಿಯಿಸುತ್ತದೆ. ನೀರಿನ ಮಟ್ಟ ಸ್ವಲ್ಪ ಇಳಿದರೂ ಸಾಕು, ಬಾಡಿ ಹೋಗುವ ಸೂರ್ಯಕಾಂತಿ ಹೊಲಕ್ಕೆ ನೀರು ಹಾಯಿಸಲು ರೈತನಿಗೆ ಎಚ್ಚರಿಕೆ ನೀಡುತ್ತದೆ.

ಮಾಹಿತಿ: ಜಿ. ಪಾಂಡುನಾಥನ್ ಗೋವಿಂದ ರಾಜು, ಪೂರ್ವರಸ್ತೆ, ಎತ್ತುಕುಡಿ, ಪಾಂಡಿಚೇರಿ.

ಸವಳು ಭೂಮಿಗೆ ತಾಳೆ ಎಲೆಯ ಔಷಧ

ತಾಳೆ ಗರಿಗಳನ್ನು ಮಣ್ಣಿಗೆ ಸೇರಿಸಿ, ಸುಮಾರು 60 ರಿಂದ 70 ದಿನಗಳ ನಂತರ ಉಳುಮೆ ಮಾಡಬೇಕು. ತಾಳೆಗರಿಗಳು ಭೂಮಿಯಲ್ಲಿನ ಲವಣಾಂಶವನ್ನು ಹೀರಿ ಕೊಂಡು, ಭೂಮಿಯನ್ನು ಹದಗೊಳಿಸುತ್ತದೆಯಂತೆ !

ಮಾಹಿತಿ: ಕೆ. ಸುಬ್ಬಯ್ಯ ಕಾಂಜು ಪಿಳ್ಳೈ, ದಕ್ಷಿಣ ರಸ್ತೆ, ಎತ್ತುಕುಡಿ, ಪಾಂಡಿಚೇರಿ.

ಸಮೃದ್ಧ ಸಸ್ಯ ಬೆಳವಣಿಗೆಗೆ ಹಸಿರು ಔಷಧ

ಬೇಳೆ ಕಾಳುಗಳ ಮೊಳಕೆಯೊಡೆಯುವ ಪ್ರಮಾಣ ಹೆಚ್ಚಿಸಿ, ಉತ್ತಮ ಬೆಳವಣಿಗೆ ಹೊಂದುವಂತೆ ಮಾಡಲು, ಬೀಜಗಳಿಗೆ ಹಸಿರು ಔಷಧದಿಂದ ಬೀಜೋಪಚಾರ ಮಾಡುತ್ತಾರಂತೆ. ಎಕ್ಕ (*Calotropis*) ಆಕೇಸಿಯಾ (*Acacia nilotica*), ಹೊಂಗೆ (*Pongamia pinnata*) ಮತ್ತು ಬೇವು ಇವೆಲ್ಲವನ್ನೂ ಚೆನ್ನಾಗಿ ಜಜ್ಜಿ ಮಿಶ್ರಮಾಡಿ ನೀರಿನಲ್ಲಿ ನೆನೆಸುತ್ತಾರೆ. ಈ ದ್ರಾವಣದಲ್ಲಿ ರಾತ್ರಿಯೆಲ್ಲಾ ನೆನೆಸಿದ ಬೀಜಗಳನ್ನು ತೆಗೆದು. ಮಾರನೇ ದಿನ ಬಿಸಿಲಿನಲ್ಲಿ ಒಂದೆರಡು ಗಂಟೆಗಳ ಕಾಲ ಒಣಗಿಸುತ್ತಾರೆ. ಹೀಗೆ ಉಪಚಾರ ಮಾಡಲ್ಪಟ್ಟ ಬೀಜದಿಂದ ಸಮೃದ್ಧಿಯಾದ ಸಸ್ಯ ಬೆಳೆಯುತ್ತದೆ.

ಮಾಹಿತಿ: ಸಿ.ಬಾಬು, ಕಾರೈಕಲ್, ಪಾಂಡಿಚೇರಿ.

ಸಂಗ್ರಹ: ಡಾ. ಆನಂದ ಕುಮಾರ್, ಪಂಡಿತ ಜವಹರಲಾಲ್ ನೆಹರು ಕೃಷಿ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (PJNCARI) ಪಾಂಡಿಚೇರಿ.

ಮೂಲ: ಹನೀಬೀ, ಸಂಪುಟ 11 -12 ಸಂಚಿಕೆ 4-1.

ದಪ್ಪ ಮೆಣಸಿನ ಕಾಯಿ - ಬೇವಿನ ಹಿಂಡಿ ಪಾತ್ರ

ದಪ್ಪಮೆಣಸಿನ ಕಾಯಿಯನ್ನು ಬೆಳೆಯುವ ಹೊಲಕ್ಕೆ ಬೇವಿನ ಹಿಂಡಿಯನ್ನು ಹಾಕಿ ಮಣ್ಣಿನಲ್ಲಿ ಮುಚ್ಚಿ ನಂತರ ನೀರು ಹಾಯಿಸುವುದರಿಂದ ಮೆಣಸಿನ ಕಾಯಿಯ ಗಾತ್ರ ಅಧಿಕವಾಗಿ ಹೊಳಪನ್ನು ಪಡೆಯಬಹುದೆಂಬುದು ಹೊಸಕೋಟೆ ತಾಲ್ಲೋಕಿನ ದೊಡ್ಡಕೋಗಿಲಿನ ರಾಜಣ್ಣನವರ ಅನುಭವವಾಗಿದೆ.

ಶಿಡ್ಲಗಟ್ಟ ತಾಲ್ಲೂಕು ಬೆಳ್ಳೂಡಿ ಗ್ರಾಮದ ವೆಂಕಟಪ್ಪನವರ ಅನುಭವ

ಈರುಳ್ಳಿ ಗಾತ್ರ ಹೆಚ್ಚಿಸಲು

ಬಿತ್ತನೆ ಮಾಡಿದ 45 ದಿನಗಳ ನಂತರ 150 ಕೆ.ಜಿ. ಹೊಂಗೆ ಹಿಂಡಿಯನ್ನು ಒಂದು ಟನ್ ಸಗಣಿಯ ಜೊತೆ ಮಿಶ್ರಣ ಮಾಡುವುದು. ಈ ಮಿಶ್ರಣವನ್ನು 4-5 ದಿನ ಮಾಗಲು ಇಡುವುದು (ಇದನ್ನು ಗುಂಡಿ ತೆಗೆದು ಮೇಲೆ ಮಣ್ಣಿನ ಪದರದಲ್ಲಿ ಹಾಕುವರು). ಹೀಗೆ ಮಾಗಿದ ಮಿಶ್ರಣವನ್ನು ನೀರಿನ ಜೊತೆಗೆ ಹಾಯಿಸುವುದು. ಈ ಪದ್ಧತಿಯಿಂದ ಈರುಳ್ಳಿಯ ಬಣ್ಣ ಮತ್ತು ಗಾತ್ರ ಹೆಚ್ಚುತ್ತದೆ. ಅಲ್ಲದೆ, ಎಲೆಗಳು ಬೇಗನೆ ಬಾಡುವುದಿಲ್ಲ ಮತ್ತು ತೇವಾಂಶ ಹಿಡಿದಿಟ್ಟುಕೊಳ್ಳಲು ಸಹಾಯವಾಗುತ್ತದೆಯಂತೆ.

ಆಲೂಗೆಡ್ಡೆಯಲ್ಲೂ......

ಬಿತ್ತನೆಗೆ ಮುಂಚೆ ತೃಣಗೊಬ್ಬರಗಳೊಡನೆ ಹೊಂಗೆ ಹಿಂಡಿಯನ್ನು ಮಣ್ಣಿನೊಂದಿಗೆ ಸೇರಿಸಿ ನೀರನ್ನು ಹಾಯಿಸಿ ನಾಟಿ ಮಾಡುವುದು. ಈ ಪದ್ಧತಿಯಿಂದ ಗೆಡ್ಡೆಗಳು ಗಟ್ಟಿಯಾಗುವುದರ ಜೊತೆಗೆ ಗಾತ್ರದಲ್ಲೂ ಹೆಚ್ಚಾಗುವುದನ್ನು ನೋಡಬಹುದಂತೆ.

ಟೊಮ್ಯಾಟೋ ಬೆಳೆ

ಸಸಿ ಮಡಿಗೆ ಹೊರಗಡೆಯಿಂದ ತರಿಸಿದ ಮಣ್ಣನ್ನು ಹಾಕುವರು. ಉದಾಹರಣೆಗೆ ಕೆರೆಯ ಗೋಡು, ಕೆಂಪುಮಣ್ಣು . ಇವರು ಎಕರೆಗೆ 8 ಟನ್ ಕೊಟ್ಟಿಗೆ ಗೊಬ್ಬರದೊಡನೆ ಹೊಂಗೆ ಹಿಂಡಿಯನ್ನು ಬೆರೆಸುವ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಈ ಹೊಂಗೆ ಹಿಂಡಿಯನ್ನು ಮೊದಲ ಹಂತದಲ್ಲಿ ನಾಟಿಯ ಸಮಯ 100 ಕೆ.ಜಿ. ಹಾಗೆ 100 ಕೆ.ಜಿ. ಹೂ ಬಿಡುವ ಸಮಯದಲ್ಲಿ ಹಾಕುತ್ತಿದ್ದಾರೆ.


ಈ ಪದ್ಧತಿಯಿಂದ ಮಣ್ಣಿನಲ್ಲಿರುವ ಕೀಟಾಣುಗಳನ್ನು ಹತೋಟಿ ಮಾಡಬಹುದು. ಅಲ್ಲದೆ ಈ ಹೊಂಗೆ ಹಿಂಡಿಯನ್ನು ಬೆರೆಸುವುದರಿಂದ ಇದು ಹಣ್ಣಿಗೆ ಹೊಳಪು ಹಾಗೂ ಮೆರಗನ್ನು ಕೊಡುತ್ತದೆ. ಹಾಗೂ ಮಾರುಕಟ್ಟೆಯಲ್ಲಿ ಒಳ್ಳೆ ಉತ್ತಮವಾದ ಬೆಲೆ ದೊರೆಯುತ್ತದೆ ಎಂಬುದು ವೆಂಕಟಪ್ಪನವರ ಅನುಭವ.

ಸಂಗ್ರಹ: ಶಶಿಕಲ, ಎಸ್.ಜಿ.

ಪಾಂಡಿಚೇರಿಯ ರೈತರ ಕೆಲವು ಕಿವಿ ಮಾತುಗಳು

1. ತೆಂಗಿನ ಗಿಡ ಕೊರೆಯುವ ದುಂಬಿ

ಪಾಂಡಿಚೇರಿಯ ಎತ್ತುಕ್ಕುಡಿ ಗ್ರಾಮದ ಪಿ.ಶೇಖರ ಪಾತು ಪಿಳ್ಳೈ ತೆಂಗಿನ ಗಿಡ ಕೊರೆಯುವ ದುಂಬಿ ಓಡಿಸಲು ಸುಲಭವಾದ ಔಷಧಿ ಹುಡುಕಿಕೊಂಡಿದ್ದಾರೆ.



ಗಿಡ ಕೊರೆಯುವ ದುಂಬಿ (*Rhinocerus beetle, Oryctes rhinocerus*) ಸುಳಿ ಕೊರೆದು ಬೆಳೆದು ನಿಂತ ತೆಂಗಿನ ಮರಗಳನ್ನೇ ಸಾಯಿಸುವುದುಂಟು. ತೆಂಗಿನ ಮರದೆಡೆಗೆ ಬರುವ ದುಂಬಿಗಳನ್ನು ಆಕರ್ಷಿಸಲು ಹರಳಿನ (Castor) ಪುಡಿ ಮತ್ತು ನೀರಾ ಅಥವಾ ಕಳ್ಳು ಬಳಸುತ್ತಾರೆ. ಸುಮಾರು 2 ಕೆ.ಜಿ.ಯಷ್ಟು ಹರಳಿನ ಬೀಜದ ಪುಡಿಯನ್ನು ಒಂದೆರಡು ಲೀಟರ್ ನೀರಾದಲ್ಲಿ ಬೆರೆಸಿ ಮಡಿಕೆಯಲ್ಲಿ ತುಂಬಿ ತೆಂಗಿನ ಗಿಡಗಳ ಮಧ್ಯದಲ್ಲಿ ಇಡುತ್ತಾರೆ. ಹೀಗೆ ತೆಂಗಿನ ತೋಟದಲ್ಲಿ ಅಲ್ಲಲ್ಲಿ ಈ ಮಡಿಕೆಗಳನ್ನು ಇಡುವುದರಿಂದ ದುಂಬಿಗಳು ತೆಂಗಿನ ಮರದ ಬದಲು ಇದಕ್ಕೆ ಆಕರ್ಷಿತವಾಗಿ ಬಂದು ತಿಂದು ಸಾಯುತ್ತವೆ. ಆದರೆ, ಮಡಿಕೆಯಲ್ಲಿನ ವಿಷ ಸಾಕು ಪ್ರಾಣಿಗಳ ಬಾಯಿ ಸೇರದಂತೆ ಎಚ್ಚರಿಕೆ ವಹಿಸುವುದು ಅತ್ಯಗತ್ಯ. ಮಡಿಕೆಯಲ್ಲಿನ ದ್ರಾವಣವನ್ನು ತಿಂಗಳಿಗೊಂದಾವರ್ತಿ ಬದಲಾಯಿಸಿದರೆ ಸಾಕು.

2. ಕೀಟ ನಿರೋಧಕ ಶಕ್ತಿಗೆ ಶೇಂಗಾ ಮತ್ತು ಬೇವಿನ ಹಿಂಡಿ

ಶೇಂಗಾ ಮತ್ತು ಬೇವಿನ ಹಿಂಡಿಯನ್ನು ರಾತ್ರಿಯಿಡೀ ನೀರಿನಲ್ಲಿ ಕೊಳೆ ಹಾಕುತ್ತಾರೆ. ಭತ್ತದ ಪೈರನ್ನು ನಾಟಿ ಮಾಡುವ ಮೊದಲು ಸಸಿಗಳ ಬೇರನ್ನು ಈ ದ್ರಾವಣದಲ್ಲಿ ಅದ್ದಿ ತೆಗೆಯುತ್ತಾರೆ. ಹೆಚ್ಚಾಗಿ ಉಳಿದ ದ್ರಾವಣವನ್ನು ನೀರಾವರಿ ಮಾಡುವ ನೀರಿನಲ್ಲಿ ಬೆರೆಸಿ ಹರಿಯ ಬಿಡುತ್ತಾರೆ. ಈ ರೀತಿಯ ಕ್ರಮದಿಂದ ಸಮೃದ್ಧಿಯಾಗಿ ಬೆಳೆಯುವ ಭತ್ತದ ಪೈರು ಕೀಟ ನಿರೋಧಿಸುವ ಶಕ್ತಿಯನ್ನು ಹೊಂದಿರುತ್ತದೆ.

ಮಾಹಿತಿ: ಕೆ. ಸಂಬಂಧಮ್, ಕಾಮನಪುರ, ಪಾಂಡಿಚೇರಿ.

3. ಗೆದ್ದಲಿನ ಹತೋಟಿಗೆ ಎಕ್ಕದ ಔಷಧಿ

ಎಕ್ಕದ ಎಲೆಗಳನ್ನು ನೀರಿನಲ್ಲಿ ಎರಡು ದಿನ ಕೊಳೆ ಹಾಕಬೇಕು. ಎರಡು ದಿನಗಳ ನಂತರ, ಮೇಲಿನ ದ್ರಾವಣವನ್ನು ಸೋಸಿ ತೆಗೆದು, ನೀರಿನೊಂದಿಗೆ ಬೆರೆಸಿ, ತೆಳು ಮಾಡಿದ ದ್ರಾವಣವನ್ನು ಗಿಡಗಳಿಗೆ ಸಿಂಪಡಿಸಬೇಕು. ಗೆದ್ದಲಿನ ಕಾಟ ವಿರುವ ಜಾಗದಲ್ಲಿ ಈ ಎಕ್ಕದ ರಸದ ದ್ರಾವಣವನ್ನು ಹಾಕುವುದರಿಂದ ಗೆದ್ದಲಿನ ಕಾಟ ಕಡಿಮೆಯಾಗುತ್ತದೆಯಂತೆ.

ಮಾಹಿತಿ: ವಿ. ಕಣ್ಣಪ್ಪನ್ ಪೈರುಕಣ್ಣನ್, ದಕ್ಷಿಣ ರಸ್ತೆ, ಎತ್ತುಕುಡಿ.


4. ಬಾಳೆಗಿಡದ ಎಲೆ ಚುಕ್ಕೆ ರೋಗದ ನಿಯಂತ್ರಣಕ್ಕೆ ಹೊಗೆ ಸೊಪ್ಪಿನ ಔಷಧಿ

ಹೊಗೆ ಸೊಪ್ಪನ್ನು ನೀರಿನಲ್ಲಿ ಸುಮಾರು ಎರಡು ದಿನಗಳ ಕಾಲ ನೆನೆಸಬೇಕು. ನಂತರ ಮೇಲಿನ ತಿಳಿ ದ್ರಾವಣವನ್ನು ತೆಗೆದು ಗಿಡಗಳಿಗೆ ಸಿಂಪಡಿಸುವುದರಿಂದ ಎಲೆ ಚುಕ್ಕೆ ರೋಗ ಹತೋಟಿಗೆ ಬರುವುದಂತೆ. ರೋಗದ ಸರಿಯಾದ ನಿಯಂತ್ರಣಕ್ಕೆ ಬೆಳಿಗ್ಗೆ ಅಥವಾ ಸಂಜೆ ಇದನ್ನು ಸಿಂಪಡಿಸುವುದು ಹೆಚ್ಚು ಸೂಕ್ತ.

ಮಾಹಿತಿ: ಎಸ್. ರವಿ ಸುಬ್ಬಯ್ಯ, ದಕ್ಷಿಣ ರಸ್ತೆ, ಎತ್ತುಕುಡಿ.

5. ಬಳ್ಳಿ ಬೆಳೆಗಳಲ್ಲಿ ಇರುವೆ ಹತೋಟಿ

ಬಳ್ಳಿಗಳಿಗೆ ಹತ್ತಿ ಹೋಗುವ ಇರುವೆಗಳನ್ನು ತಡೆಯಲು, ಒಂದು ಬಟ್ಟೆಯನ್ನು ಸೀಮೆ ಎಣ್ಣೆಯಲ್ಲಿ ಅದ್ದಿ, ಬಳ್ಳಿ ಹಬ್ಬುವ ಚಪ್ಪರದ ಕಾಲುಗಳಿಗೆ ಕಟ್ಟಬೇಕು. ಸೀಮೆ ಎಣ್ಣೆ ಇರುವೆಗಳನ್ನು ಓಡಿಸುತ್ತದೆಯಂತೆ.



ಮಾಹಿತಿ: ವಿ. ಕಣ್ಣಪ್ಪನ್ ವೈರಕಣ್ಣೆ, ದೇವಾಸ್ಥಾನದ ರಸ್ತೆ, ಎತ್ತುಕುಡಿ, ಪಾಂಡಿಚೇರಿ.

6. ಭತ್ತದ ತೆನೆ ತಿಗಣೆ (Earhead bug) ನಿಯಂತ್ರಣ

4-5 ಕೆ.ಜಿ.ಭತ್ತದ ಹೊಟ್ಟನ್ನು ಒಂದು ಲೀಟರ್‌ನಷ್ಟು ಸೀಮೆ ಎಣ್ಣೆಯಲ್ಲಿ ಬೆರೆಸಿ ಮುಂಜಾನೆಯ ಹೊತ್ತಿನಲ್ಲಿ ಭತ್ತದ ಗದ್ದೆಯಲ್ಲಿ ಸಿಂಪಡಿಸಬೇಕು. ಈ ಕ್ರಮ ಭತ್ತದ ತೆನೆಗಳನ್ನು ಕಾಡುವ ತೆನೆ ತಿಗಣೆಯನ್ನು ನಿಯಂತ್ರಿಸುತ್ತದಂತೆ.

ಮಾಹಿತಿ: ಪಿ. ಗಣೇಶನ್ ಪೂರ್ನಾಕು, ದೇವಸ್ಥಾನದ ರಸ್ತೆ, ಎತ್ತುಕುಡಿ, ಪಾಂಡಿಚೇರಿ.

7. ತೆಂಗಿನ ಮರಕ್ಕೆ ಅಳಿಲು, ಇಲಿಗಳ ಕಾಟವೇ?

ತೆಂಗಿನ ಮರ ಹತ್ತಿ ಅಳಿಲು ಕಾಡುತ್ತಿದೆಯೇ? ಬುಡದಿಂದ ಸುಮಾರು ಹತ್ತು ಅಡಿ ಎತ್ತರಕ್ಕೆ ಮರದ ಸುತ್ತ ಸುಮಾರು ಎರಡು ಅಡಿ ಅಗಲದ ತಗಡಿನ ಹಾಳೆಯನ್ನು ಮೊಳೆಯಿಂದ ಹೊಡೆದು ಕಟ್ಟಿ ಬಿಡಬೇಕು. ಅಳಿಲುಗಳಿಗೆ ಮರ ಹತ್ತಲು ಸಾಧ್ಯವಾಗದೆ ಅವುಗಳ ಕಾಟ ತಪ್ಪುತ್ತದೆ.

ಮಾಹಿತಿ: ಪಿ. ಶೇಖರ ಪಾಡು ಪಿಳ್ಳೈ, ವಾಡಕ್ಕು ಬೀದಿ, ತಿರುಕ್ಕುವಲ್ಲೈ.
ಸಂಗ್ರಹ: ಎ. ಸೆಂತಾಮಿಯ ಸೆಲ್ವನ್, ಕರ್ರಾಕಾಲ, ಪಾಂಡಿಚೇರಿ.

8. ಬಾಳೆ, ತರಕಾರಿ ತೋಟಕ್ಕೆ ಸೇವಂತಿಗೆಯ ನೆರವು

ಬದನೆ, ಟೊಮಾಟೊ, ಮೆಣಸಿನ ತೋಟದ ಬದುಗಳಲ್ಲಿ ಸೇವಂತಿಗೆ ಹೂವಿನ ಗಿಡ ಬೆಳೆಸುವುದರಿಂದ ಆ ತರಕಾರಿಗಳನ್ನು ಕಾಡುವ ಕಾಯಿಕೊರಕದ ಕಾಟ ತಪ್ಪುತ್ತದೆಯಂತೆ, ಅದೇ ರೀತಿ ಬಾಳೆ ಸಸಿ ನೆಡುವ ಮೊದಲು ಮತ್ತು ಬದನೆ, ಮೆಣಸು, ಟೊಮಾಟೊ ಸಸಿಗಳನ್ನು ನೆಡುವ ಮೊದಲು ಕೂಡಾ ಸೇವಂತಿಗೆಯ ಗಿಡಗಳನ್ನು ನೆಡುವುದರಿಂದ ಈ ಬೆಳೆಗಳನ್ನು ಕಾಡುವ ಸೊರಗು ರೋಗದಿಂದ ಮುಕ್ತಿ ಪಡೆಯಬಹುದು ಎನ್ನುತ್ತಾರೆ ತಮಿಳುನಾಡಿನ ಕರಿಯಮಾಣಿಕ್ಕಂ ಹಳ್ಳಿಯ ರೈತರು.

9. ಬೇವಿನ ಎಲೆಯ ಗೊಬ್ಬರದಿಂದ ಕೀಟ-ರೋಗ ನಿರೋಧಕ ಶಕ್ತಿ ಪಡೆಯುವ ಭತ್ತ

ಪಾಂಡಿಚೇರಿಯ ರೈತರು ಭತ್ತದ ಸಸಿ ಮಡಿ ಮಾಡುವ ಎರಡು ವಾರಗಳ ಮೊದಲು ಬೇವಿನ ಎಲೆಯನ್ನು ಮಣ್ಣಿಗೆ ಸೇರಿಸಿ ಚೆನ್ನಾಗಿ ಉಳುಮೆ ಮಾಡಿ ಕೊಳೆಯಲು ಬಿಡುತ್ತಾರೆ. ಹೀಗೆ ಚೆನ್ನಾಗಿ ಕೊಳೆತ ಬೇವು ಮಣ್ಣಿನಲ್ಲಿ ಚೆನ್ನಾಗಿ ಬೆರೆತ ನಂತರ ಸಸಿ ಮಡಿ ಮಾಡಿ, ಭತ್ತದ ಬೀಜ ಬಿತ್ತುತ್ತಾರಂತೆ. ಇಂತಹ ಸಸಿ ಮಡಿಯಲ್ಲಿ ಬೆಳೆಯುವ ಭತ್ತದ ಸಸಿಗಳು ಸದೃಢವಾಗಿದ್ದು ಕೀಟ ಮತ್ತು ರೋಗ ನಿರೋಧಕ ಶಕ್ತಿ ಹೊಂದಿರುತ್ತದೆ.

ಮಾಹಿತಿ: ಜಯರಾಜಕುಮಾರ್, ಪಾಂಡಸೋಲಿನಲ್ಲೂರು, ಪಾಂಡಿಚೇರಿ.

10. ಹತ್ತಿಯಲ್ಲಿ ಬಿಳಿನೊಣದ ನಿಯಂತ್ರಣ

ಬಿಳಿ ನೊಣ (*Bemisia tabaci*) ಹತ್ತಿ ಗಿಡದ ಎಲೆಯ ಅಡಿಯಲ್ಲಿ ಸೇರಿ, ರಸ ಹೀರಿ ಗಿಡವನ್ನು ನಿಧಾನವಾಗಿ ಶಕ್ತಿ ಹೀನವನ್ನಾಗಿ ಮಾಡುತ್ತದೆ.



ಬಾಲಸುಬ್ರಮಣಿಯಂರವರು ಕಾಗದಕ್ಕೆ ಹರಳೆಣ್ಣೆಯನ್ನು ಹಚ್ಚಿ 5-6 ಅಡಿ ಅಂತರದಲ್ಲಿ ಗಿಡಗಳ ಮಧ್ಯೆ ಇವನ್ನು ಕಡ್ಡಿಗಳಿಗೆ ಕಟ್ಟಿ, ಅನಂತರ ಸ್ಪ್ರೇಯರ್‌ನಿಂದ ಜೋರಾಗಿ ಗಿಡಗಳ ಮೇಲೆ ಗಾಳಿ ಹಾಯಿಸುತ್ತಾರೆ. ಬಿಳಿ ನೊಣ ಗಾಳಿಯ ರಭಸಕ್ಕೆ ಗಿಡದಿಂದ ಮೇಲೆದ್ದು ಹಾರುತ್ತಾ ಹೋಗಿ ಹರಳೆಣ್ಣೆಯ ಹಾಳೆಗಳಿಗೆ ಅಂಟಿ ಕೊಳ್ಳುತ್ತದೆ. ಶೇಕಡಾ 90ರಷ್ಟು ಕೀಟ ನಿಯಂತ್ರಣ ಈ ಪದ್ಧತಿಯಿಂದ ಸಾಧ್ಯ ಎನ್ನುತ್ತಾರೆ ಪಾಂಡಿಚೇರಿಯ ರೈತರು.

ಮಾಹಿತಿ: ಕೆ. ಬಾಲಸುಬ್ರಮಣಿಯಂ, ಸಾತುರಮಂಗಲಂ, ಪಾಂಡಿಚೇರಿ.

ಸಂಗ್ರಹ: ಡಾ. ಆನಂದ ಕುಮಾರ್, ಪಂಡಿತ ಜವಹರಲಾಲ್ ನೆಹರು ಕೃಷಿ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (PJNCARI) ಪಾಂಡಿಚೇರಿ.

11. ಹರಳಿನ ಗಿಡದ ರಕ್ಷಣೆಗೆ ಬೇವಿನ ಎಲೆಯ ನೆರವು

ಕೊಂಡಲಿಹುಳು (*Achaea janata*) ಹರಳಿನ ಗಿಡದ ಎಲೆಗಳನ್ನೆಲ್ಲಾ ತಿಂದು ನಾಶಪಡಿಸುತ್ತದೆ. ಗುಜರಾತಿನ ರೈತರು ಈ ಕೊಂಡಲಿ ಹುಳದ ನಿಯಂತ್ರಣ



ಮಾಡಲು ಕಂಡುಕೊಂಡಿದ್ದು ಬೇವು. ಸುಮಾರು ಎರಡು ಕೆ.ಜಿ.ಯಷ್ಟು ಬೇವಿನ ಎಲೆಯನ್ನು 2-3 ಲೀಟರ್‌ನಷ್ಟು ಪ್ರಮಾಣದ ಆಡಿನ ಮೂತ್ರದಲ್ಲಿ ನೆನೆಸಿಡುತ್ತಾರೆ. ನಂತರ 500 ಮಿ.ಲಿ.ನಷ್ಟು ಸೋಸಿದ ದ್ರಾವಣವನ್ನು 15 ಲೀಟರ್ ನೀರಿನಲ್ಲಿ ಬೆರೆಸಿ ಹರಳಿನ ಗಿಡಗಳ ಮೇಲೆ ಸಿಂಪಡಿಸುತ್ತಾರೆ. ಐದು ದಿನಗಳ ನಂತರ ಪುನ: ಇದೇ ಔಷಧವನ್ನು ಪುನರಾವರ್ತಿಸುತ್ತಾರೆ.

ಮಾಹಿತಿ: ಅರ್ಜುನಾಭಾಯಿ, ಭಾಲಾಬಾಯಿ ದರ್ಬಾರ, ಜಾದೋಲ, ದಿಸಾ ತಾಲ್ಲೂಕು, ಬನಸ್ಕಾಂತ, ಗುಜರಾತ್.

ಮೂಲ: ಹನೀಬೀ, ಸಂಪುಟ 11 -12 ಸಂಚಿಕೆ 4-1.

ಟೊಮ್ಯಾಟೋ ಹೇನುಗಳಿಂದ ರಕ್ಷಣೆ

ಶಿಡ್ಲಗಟ್ಟ ತಾಲ್ಲೂಕಿನ ಬೆಳ್ಳೋಟಿ ಗ್ರಾಮದ ವೆಂಕಟಪ್ಪನವರು ತಮ್ಮ ಟೊಮ್ಯಾಟೊ ಹೊಲದಲ್ಲಿ ಕಾಣಿಸಿಕೊಂಡ ಹೇನುಗಳನ್ನು ನೈಸರ್ಗಿಕವಾಗಿ ಹತೋಟಿ ಮಾಡಲು ಪ್ರಯತ್ನಿಸಿದ್ದಾರೆ. ಇವರ ಪ್ರಕಾರ 25 ಗ್ರಾಂ. ಸೀತಾಫಲದ ಸೊಪ್ಪನ್ನು 1 ಲೀಟರ್ ನೀರಿನಲ್ಲಿ ನೆನೆಸಿ ಅದನ್ನು ಅರೆದು ಸೋಸಬೇಕು. ಸೋಸಿದ ರಸವನ್ನು 1 ಲೀಟರ್ ನೀರಿಗೆ ಹಾಕಿ ನಂತರ 5 ಗ್ರಾಂ ಸೋಪ್ ಪೌಡರ್ (ನಿರ್ಮಾ ಅಥವಾ ಸರ್ಫ್) ಬೆರೆಸಿ ಸಂಜೆಯ ವೇಳೆ ಸಿಂಪಡಿಸುವುದು ಉತ್ತಮ. ಇದರಿಂದ ಟೊಮ್ಯಾಟೋ ಬೆಳೆಗೆ ಬೀಳುವ ಹೇನುಗಳಿಂದ ರಕ್ಷಣೆ ಸಿಗುವುದಂತೆ.


ಹಿಪ್ಪುನೇರಳೆ ಸೊಪ್ಪಿನ ಬೇರಿನ ಗಂಟು ರೋಗದ ನಿವಾರಣೆ

ಹಿಪ್ಪುನೇರಳೆ ಸೊಪ್ಪಿನಲ್ಲಿ ಬೇರಿನ ಗಂಟು ರೋಗ ನಿವಾರಣೆಗೆ ಹೊಸಕೋಟೆ ತಾಲೋಕಿನ ರಾಜಣ್ಣನವರು ಒಂದು ಹೊಸ ವಿಧಾನ ರೂಪಿಸಿರುವರು. ಹಿಂಡಿಯನ್ನು ಉಳುಮೆ ಮಾಡಿದ ನಂತರ ಹೊಲಕ್ಕೆ ಹಾಕಿ ಮಣ್ಣಿನಿಂದ ಮುಚ್ಚಿ ನಂತರ ನೀರನ್ನು ಕಟ್ಟುವುದರಿಂದ ಬೇರಿನ ಗಂಟನ್ನು ನಿವಾರಿಸಬಹುದು ಹಾಗೂ ಇದರಿಂದ ಎಲೆಯ ಇಳುವರಿ ವೃದ್ಧಿಸುತ್ತದೆ ಎಂಬುದು ರಾಜಣ್ಣನವರ ಅನುಭವವಾಗಿದೆ.

ಸಂಗ್ರಹ: ಶಶಿಕಲ ಎಸ್.ಜಿ.

ಭತ್ತದ ಹುಲ್ಲು

ಭತ್ತದ ಹುಲ್ಲಿನಿಂದ ಹೆಣೆದ ಹಗ್ಗದ ಬುಟ್ಟಿಯ ಒಳಗೆ ತೇಗ(*Tectona grandis*)ದ ಎಲೆಗಳನ್ನು ಹರಡಿ, ಅದರ ಮೇಲೆ ಬೇಳೆ ಕಾಳುಗಳನ್ನು ತುಂಬಿಸುತ್ತಾರಂತೆ, ಹೀಗೆ



ತುಂಬಿಸುವಾಗ ಬೇಳೆ ಕಾಳುಗಳ ಜೊತೆಯಲ್ಲಿ ಬೇವಿನ ಎಲೆ, ಕಬ್ಬಿಣದ ತುಂಡುಗಳು, ಬೂದಿ, ಚರ್ಮ, ಉದ್ದು ಅಥವಾ ಹೆಸರು ಬೇಳೆಯ ಹೊಟ್ಟು ಇವನ್ನೆಲ್ಲಾ ಒಟ್ಟಾಗಿ ಸೇರಿಸಿ, ಬೆರೆಸಿ ಅನಂತರ ಕಟ್ಟಬೇಕು. ಸಂಪೂರ್ಣವಾಗಿ ಮುಚ್ಚಿದ ಬುಟ್ಟಿಯನ್ನು ಮಣ್ಣು ಮತ್ತು ಸಗಣಿಯಿಂದ ಸಾರಿಸಬೇಕು. ಹೀಗೆ ಸಂಗ್ರಹಿಸಿದ ಬೇಳೆಕಾಳುಗಳು ವರ್ಷಾನುಗಟ್ಟಲೆ ಹಾಳಾಗದೇ ಉಳಿಯುವುದಂತೆ.

ಮಾಹಿತಿ: ಬಾಜಪ್ಪೆ ಬ್ರಾಲಾಭಾಯಿ ಗಾವಿಂತ, ಬಿಲ್‌ಪುಡಿ, ಧರ್ಮಾಪುರ ತಾಲ್ಲೂಕು, ವಲ್ಸಾದ್, ಗುಜರಾತ್.

(ಈ ಕ್ರಮ ನಮ್ಮ ದಕ್ಷಿಣ ಕನ್ನಡದಲ್ಲಿ ಬಳಕೆಯಿರುವ ಮೂಡೆಯನ್ನು ಹೋಲುತ್ತದೆ)

ಬೇವು

30 ಗ್ರಾಂ. ಬೇವಿನ ಬೀಜದ ಪುಡಿಯನ್ನು ಒಂದು ಕೆ.ಜಿ. ಬೇಳೆಕಾಳುಗಳ ಜೊತೆ ಬೆರೆಸಿ ಸಂಗ್ರಹಿಸಬೇಕು ಅಥವಾ ಒಂದು ಕೆ.ಜಿ. ಕಾಳುಗಳಿಗೆ 2-3 ಮಿ.ಲಿ. ಬೇವಿನ ಎಣ್ಣೆಯನ್ನು ಸವರಿ ಕೂಡಾ ಬೇಳೆಕಾಳುಗಳ ಸಂಗ್ರಹಣೆ ಮಾಡಬಹುದು. ಸಂಗ್ರಹಿಸುವ ಕಾಳುಗಳ ತೂಕದ ಶೇಕಡಾ 1-2 ರಷ್ಟು ತೂಕದ ಎಣ್ಣೆಯನ್ನು ಬಳಸಬೇಕು.

ಮಾಹಿತಿ: ವೆಬ್‌ಸೈಟ್ www.ciks.org.

ಪಾಂಡಿಚೇರಿಯ ಕೆಲವು ಧಾನ್ಯ ಸಂಗ್ರಹಣಾ ಕ್ರಮಗಳು

ಧಾನ್ಯ ಸಂಗ್ರಹಣೆಗೆ ಉಪ್ಪು

ಧಾನ್ಯ ಸಂಗ್ರಹಣೆ ಮಾಡಿಡುವ ಮಡಿಕೆಯ ಕೆಳಗೆ ಉಪ್ಪು ಹಾಕಿಡುವುದರಿಂದ ಸಂಗ್ರಹಿಸಿದ ಧಾನ್ಯಕ್ಕೆ ಕೀಟಗಳ ಕಾಟ ಕಡಿಮೆಯಾಗುವುದಂತೆ.

ಮಾಹಿತಿ: ಜಿ. ಪಾಂಡುರಂಗನ್ ಗೋವಿಂದ ರಾಜು, ಪೂರ್ವ ರಸ್ತೆ, ಎತ್ತುಕುಡಿ, ಪಾಂಡಿಚೇರಿ.

ಸಂಗ್ರಹಕರು: ಡಾ. ಎಸ್. ಆನಂದಕುಮಾರ್, ಪಂಡಿತ ಜವಹರಲಾಲ್ ನೆಹರು ಕೃಷಿ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (PJNCARI) ಪಾಂಡಿಚೇರಿ.

ಬೆಳ್ಳುಳ್ಳಿಯೊಂದಿಗೆ ರಾಗಿಯ ಬೆರಕೆ

ಸಂಗ್ರಹಿಸಿದ ಬೆಳ್ಳುಳ್ಳಿ ಮೊಳಕೆಯೊಡೆದು ಹಾಳಾಗುವುದುಂಟು. ಇದನ್ನು ತಪ್ಪಿಸಲು ಬೆಳ್ಳುಳ್ಳಿಯನ್ನು ರಾಗಿಯೊಂದಿಗೆ ಬೆರೆಸಿಡುತ್ತಾರೆ. ಸುಮಾರು 10 ಕೆ.ಜಿ. ಬೆಳ್ಳುಳ್ಳಿಯೊಂದಿಗೆ, 2 ಕೆ.ಜಿ. ರಾಗಿಯನ್ನು ಬೆರೆಸಿ ಇಡುವುದರಿಂದ ಬೆಳ್ಳುಳ್ಳಿ ಮೊಳಕೆಯೊಡೆದು ಹಾಳಾಗುವುದಿಲ್ಲವಂತೆ. ರಾಗಿ ಬೆಳ್ಳುಳ್ಳಿಯಲ್ಲಿನ ನೀರಿನ ಅಂಶ ಹೀರುವುದರಿಂದ, ಬೆಳ್ಳುಳ್ಳಿ ಸುರಕ್ಷಿತ. (ಬೆಳ್ಳುಳ್ಳಿಯನ್ನು ಅಕ್ಕಿಯೊಂದಿಗೆ ಹಾಕಿಡುವುದರಿಂದ ಕೂಡಾ ಬೆಳ್ಳುಳ್ಳಿ ರಕ್ಷಣೆ ಮಾಡಬಹುದು).

ಮಾಹಿತಿ: ಪಿ. ಗಣೇಶನ್, ದೇವಸ್ಥಾನದ ರಸ್ತೆ, ಎತ್ತುಕುಡಿ, ಪಾಂಡಿಚೇರಿ.

ಬೇಳೆಕಾಳುಗಳ ಸಂಗ್ರಹಣೆಗೆ ಕೆಂಪು ಮಣ್ಣು

ಕೆಂಪು ಮಣ್ಣಿಗೆ ನೀರು ಬೆರೆಸಿ, ಸಣ್ಣ ಸಣ್ಣ ಉಂಡೆಗಳಾಗಿ ಮಾಡಿ ಬಿಸಿಲಿನಲ್ಲಿ ಒಣಗಿಸಬೇಕು. ಹೀಗೆ ಒಣಗಿಸಿದ ಮಣ್ಣಿನ ಉಂಡೆಗಳನ್ನು ಬೇಳೆಕಾಳುಗಳೊಂದಿಗೆ ಬೆರೆಸಿಡಬೇಕು. ಕೆಂಪು ಮಣ್ಣಿನಲ್ಲಿರುವ ಆಮ್ಲದ ಗುಣ ಕೀಟಗಳನ್ನು ದೂರದಲ್ಲಿಡುವುದಂತೆ.

ಮಾಹಿತಿ: ಎ. ಮುತ್ತು ಅರುಣಾಚಲಂ, ವೇದಕ್ಕ, ತಿರುವುವಲ್ಲೈ, ಪಾಂಡಿಚೇರಿ.

ಬೇವು, ಹೊಂಗೆಯ ಎಲೆಗಳಿಂದ ಸಂಗ್ರಹಣಾ ಪೀಡೆಗಳ ಹತೋಟಿ

ಧಾನ್ಯ ಸಂಗ್ರಹಣೆ ಮಾಡುವ ಡಬ್ಬ ಅಥವಾ ಗುಡಾಣದಲ್ಲಿ ಧಾನ್ಯಗಳ ಜೊತೆಗೆ ಬೇವು ಮತ್ತು ಹೊಂಗೆಯ ಎಲೆಗಳನ್ನು ಬೆರೆಸಬೇಕು. ಈ ಎಲೆಗಳನ್ನು ಆಗಾಗ ಬದಲಾಯಿಸುತ್ತಿರಬೇಕು.

ಒಣಗಿದ ಬೇವು, ಹೊಂಗೆ ಎಲೆಗಳ ಜೊತೆಗೆ ಒಣ ಮೆಣಸಿನ ಕಾಯಿಗಳನ್ನು ಸೇರಿಸಿ ಒಂದು ಮಡಕೆಯಲ್ಲಿ ಸುಟ್ಟು ಹೊಗೆ ಹಾಕಬೇಕು. ಧಾನ್ಯ ಸಂಗ್ರಹಣಾ ಕೋಣೆಯಲ್ಲಿ ಆಗಾಗ ಈ ರೀತಿ ಹೊಗೆ ಹಾಕುವುದರಿಂದ ಕೀಟಗಳ ಕಾಟ ಇರುವುದಿಲ್ಲ.

ಮಾಹಿತಿ: ಸಿ. ಬಾಬು, PJNCARI, ಕಾರೈಕಾಲ.

ಸಂಗ್ರಹಕರು: ಡಾ. ಎಸ್. ಆನಂದಕುಮಾರ್, ಪಂಡಿತ ಜವಹರಲಾಲ್ ನೆಹರು ಕೃಷಿ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (PJNCARI) ಪಾಂಡಿಚೇರಿ.
ಮೂಲ: ಹನೀಬೀ, ಸಂಪುಟ 11 -12 ಸಂಚಿಕೆ 4-1.

ವಿಶೇಷ ಸೂಚನೆ

ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ವಾಣಿಜ್ಯ ದೃಷ್ಟಿಯಿಂದ ಬಳಸಬಯಸುವವರು ಮೊದಲು ಅದನ್ನು ಹಿತ್ತಲಗಿಡದ ಗಮನಕ್ಕೆ ತರಬೇಕಾಗಿ ಈ ಮೂಲಕ ಸೂಚಿಸಲಾಗಿದೆ.

ರೈತರು ಮೊದಲು ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳು, ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.

ಈ ಬಗ್ಗೆ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ಹಿತ್ತಲಗಿಡ ಜವಾಬ್ದಾರಿಯಲ್ಲ.

- ಸಂಪಾದಕ

ಜಾನುವಾರುಗಳಿಗೆ ಕಂದು ರೋಗ ನಿವಾರಣೆ

ಈ ರೋಗದ ಲಕ್ಷಣಗಳೆಂದರೆ ದೇಹ, ಕಾಲು ಬಿಗಿಯುವುದು, ಮೇವು ತಿನ್ನದಿರುವುದು ಹಾಗೂ ಜ್ವರ ಬರುವುದು. ಈ ರೋಗ ನಿವಾರಣೆಗೆ ಶಿಡ್ಲಘಟ್ಟ ತಾಲೋಕು ಬೆಳ್ಳೋಟಿ ಗ್ರಾಮದ ರಾಮಕ್ಕನವರು ಕಂಡು ಕೊಂಡ ವಿಧಾನವೆಂದರೆ 200 ಮೀ.ಲೀ. ಸಾರಾಯಿಯ ಜೊತೆ ಆನೆಪಳ್ಳಾರಿ (*Acacia* sp.) ಸೊಪ್ಪನ್ನು ಅರೆದು ಒಂದು ಲೀಟರ್‌ನಷ್ಟು ರಸವನ್ನು ತೆಗೆದು, ಈ ಮಿಶ್ರಣಕ್ಕೆ 10 ಗ್ರಾಂ. ಕರ್ಪೂರ ಹಾಗೂ 25-30 ಗ್ರಾಂ ಕೊಬ್ಬರಿ ಎಣ್ಣೆ ಸೇರಿಸಿ, ಮೈಗೆ ಬಳಿಯುವುದು.

- ರಾಮಕ್ಕ, ಬೆಳ್ಳೋಡಿ, ಶಿಡ್ಲಗಟ್ಟ (ತಾ.)

ಹಸುಕಾಲಿಗೆ ಹುಳ ಬಿದ್ದರೆ

ಕೆಂಪು ಮಣ್ಣನ್ನು ಬಟ್ಟೆಯಲ್ಲಿ ಸುತ್ತಿ ಕಾಲಿಗೆ ಕಟ್ಟುವುದರಿಂದ ಜಾನುವಾರುಗಳ ಕಾಲಿಗೆ ಬೀಳುವ ಹುಳುಗಳ ಭಾದೆ ಕಡಿಮೆಯಾಗುವುದಾಗಿ ದೊಡ್ಡ ಕೋಗಿಲು ರಾಜಣ್ಣನವರು ಅಭಿಪ್ರಾಯ ಪಡುತ್ತಾರೆ.

ಕೆಚ್ಚಲು ಬಾವು ನಿವಾರಣೆಗೆ

ಸರ್ವೆಸೊಪ್ಪು (*Casuarina equesetifolia*), ದೊಡ್ಡ ಪತ್ರೆ (*Coleus amboinicus*) ಹಾಗೂ ತೊಂಡೆ ಸೊಪ್ಪು (*Coccinea indica*) ಅರೆದು ಇವುಗಳ ರಸವನ್ನು ಕೆಚ್ಚಲಿಗೆ ಸವರುವುದರಿಂದ ಈ ಕೆಚ್ಚಲುಬಾವನ್ನು ತಡೆಗಟ್ಟಬಹುದು ಎಂಬುದು ಹೊಸಕೋಟೆ ತಾಲೂಕು ದೊಡ್ಡಕೋಗಿಲು ರಾಜಣ್ಣನವರ ಅನುಭವ ಹಾಗೂ ನಡೆಸಿಕೊಂಡು ಬಂದಿರುವ ಪದ್ಧತಿ. ಇದಲ್ಲದೆ ತೊಂಡೆ ಸೊಪ್ಪು, ಕಡಲೆ ಸೊಪ್ಪು, ಸರ್ವೆಸೊಪ್ಪು ಮತ್ತು ಅರಿಶಿನ ಪುಡಿ ಕುಟ್ಟಿ, ರಸವನ್ನು ತೆಗೆದು ಅದನ್ನು ಕೆಚ್ಚಲಿಗೆ ಸವರುವುದು ಮತ್ತು ಸೊಪ್ಪನ್ನು ತಿನ್ನಿಸುವುದರಿಂದ ಕೆಚ್ಚಲು ಬಾವನ್ನು ಕಡಿಮೆ ಮಾಡಬಹುದೆಂಬುದೂ ಇವರ ಅನುಭವವಾಗಿದೆ.

ಸಂಗ್ರಹ: ಎಸ್.ಜಿ. ಶಶಿಕಲ ಮತ್ತು ಸಿ.ಜೆ. ನಾಗೇಶ್

ತಮಿಳುನಾಡು ರೈತರ ನಾಟಿ ಪದ್ಧತಿಗಳು

ಕೆಚ್ಚಲು ಬಾವಿಗೆ ಇನ್ನೊಂದು ಚಿಕಿತ್ಸೆ

ಅಂಗೈ ಅಗಲದ ಬೇವಿನ ಚಕ್ಕೆ ಮತ್ತು ಬುಗರಿ ಮರ ಅಥವಾ ಹೂವರಸಿ ಮರದ ಚಕ್ಕೆ ಇವೆರಡನ್ನೂ ಕುಟ್ಟಿ, ನೆನೆಹಾಕಿ, ರಸವನ್ನು ಅರೆದು ಕುಡಿಸಿದರೆ, ಜಾನುವಾರುಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಕೆಚ್ಚಲು ಬಾವು ಗುಣವಾಗುವುದು. ಈ ವಿಚಾರ ಕಳೆದ ವರ್ಷ ಹಾಸನದ ಬಸವರಾಜು ಸಂತೇಶಿವರ ಅವರ ತೋಟದಲ್ಲಿ ನೆಡೆದ ಪರಿಸರ ಕೃಷಿಕರ ಸಮಾವೇಷದಲ್ಲಿ ತಿಳಿದು ಬಂದಿರುತ್ತದೆ. ಈ ಬುಗುರಿ ಕಾಯಿಯನ್ನು ಅರೆದು ಬರುವ ಹಳದಿ ರಸದಿಂದ ಮನುಷ್ಯರ Ring Worm ಚರ್ಮರೋಗವನ್ನು ಗುಣಪಡಿಸ ಬಹುದಂತೆ.

ಹಸುಗಳಲ್ಲಿ ಲಕ್ವ

ಹಸುಗಳ ಕಾಲು ನಡುಕ ಮತ್ತು ಬಾಯಿಯಲ್ಲಿ ನೊರೆ ಸೋರುವುದು. ಲಕ್ವ ಕಾಯಿಲೆಯ ಲಕ್ಷಣಗಳಾಗಿವೆ. ಈ ಕಾಯಿಲೆಯನ್ನು 100 ಗ್ರಾಂ ಹೆಬ್ಬೇವಿನ (*Aslistolochia indica*) ಎಲೆಗಳನ್ನು ಚೆನ್ನಾಗಿ ಅರಿದು ಅದನ್ನು 200 ಮಿ.ಲೀ. ಮಜ್ಜಿಗೆಯಲ್ಲಿ ಬೆರೆಸಿ, ಒಂದು ದಿನಕ್ಕೆ ಮೂರು ಬಾರಿ ಕುಡಿಸುವುದರಿಂದ ನಿವಾರಿಸಬಹುದು.

ಕರುಗಳಲ್ಲಿ ಕಾಲು ಊತ

ಕರುಗಳ ಮೊಣಕಾಲು ಮತ್ತು ಮಂಡಿಯಲ್ಲಿ ಊತವಿದ್ದರೆ ಕ್ಲೀರೋಡೆಂಡ್ರಾನ್ (*Clerodendrum inerme*) ಎಲೆಗಳನ್ನು ನೀರಿನೊಂದಿಗೆ ಅರೆದು, ರಸವನ್ನು ಕರುಗಳಿಗೆ ಕುಡಿಸಿ ಉಳಿದ ಎಲೆಯ ತ್ಯಾಜ್ಯವನ್ನು ಊತಕ್ಕೆ ಹಚ್ಚುವುದರಿಂದ ಊತ ಕಡಿಮೆಯಾಗುತ್ತದೆ.

ಕೊಂಬುಗಳಲ್ಲಿ ತುರಿಕೆ

ಹಸುಗಳ ಕೊಂಬುಗಳಲ್ಲಿ ತುರಿಕೆ ಉಂಟಾದಾಗ ಹಸುಗಳು ಕೊಂಬನ್ನು ಗೋಡೆಗಳಿಗೆ ಅಥವಾ ಕಲ್ಲಿಗೆ ಉಜ್ಜುತ್ತವೆ. ಕೊಂಬಿನ ಒಳಭಾಗದಲ್ಲಿ ರೋಗಾಣುಗಳ ಭಾದೆ ಕಂಡಾಗ ಕೊಂಬಿನಲ್ಲಿ ತುರಿಕೆ ಕಂಡು ಬರುತ್ತದೆ. 50-100 ಗ್ರಾಂ ಹಾಗಲಕಾಯಿ ಗಿಡದ ಬೇರನ್ನು ಚೆನ್ನಾಗಿ ಅರೆದು 250 ಮಿ.ಲೀ. ನೀರಿನಲ್ಲಿ ಬೆರೆಸಿ ಹಸುಗಳಿಗೆ ಕುಡಿಸುವುದರಿಂದ ಹಸುಗಳ ಈ ಕೊಂಬು ತುರಿಕೆಯನ್ನು ನಿವಾರಿಸಬಹುದು.

ಹಸುಗಳಿಗೆ ಮೂತ್ರ ನಿಂತಾಗ

ಮುತ್ತಗದ (*Butea monosperma*) ಹೂವಿನಿಂದ ಡಿಕಾಕ್ಷನ್ ಮಾಡಿ, ದಿನಕ್ಕೆರಡು ಬಾರಿ 60 ಮಿ.ಲೀ.ನಂತೆ ಹಸುವಿಗೆ ಕುಡಿಸುವುದರಿಂದ ಹಸುಗಳ ಈ ರೋಗ ನಿವಾರಣೆ ಮಾಡಬಹುದು.

ಮೂಲ: ಹನೀಬೀ, 11, 12 (4 ಮತ್ತು 1) 2001

ಔಷಧಿ ಸಸ್ಯಗಳ ಬಾಲಿಕೆ - ಶೋಭಾ

ಚಿಕ್ಕ ಬೆಳವಂಗಲ ಗ್ರಾಮ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಒಂದು ಹಳ್ಳಿ. ಈ ಹಳ್ಳಿಯ ಜ್ಞಾನವಾಹಿನಿ ಪಾಠಶಾಲೆಯ 6ನೇ ತರಗತಿಯ ವಿದ್ಯಾರ್ಥಿನಿ ಶೋಭಾ ಎಲ್., ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ಬೆಂಗಳೂರು ಇವರು ನಡೆಸಿದ 8ನೇ ಜಿಲ್ಲಾ ಮಟ್ಟದ ಮಕ್ಕಳ ವಿಜ್ಞಾನ ಸಮಾವೇಶ-2000ದಲ್ಲಿ ಜಿಲ್ಲಾ ಮಟ್ಟದ ಪ್ರಥಮ ಸ್ಥಾನಗಳಿಸಿದ್ದಾಳೆ. ಈಕೆಗೆ ಪ್ರಥಮ ಸ್ಥಾನ ತಂದು ಕೊಟ್ಟಿದ್ದು "ಉತ್ತಮ ಭವಿಷ್ಯಕ್ಕಾಗಿ ದೇಶಿ ವೈಜ್ಞಾನಿಕ ಜ್ಞಾನ" ಎಂಬ ಶೀರ್ಷಿಕೆಯಡಿಯಲ್ಲಿ ಮಂಡಿಸಿದ ಔಷಧಿ ಸಸ್ಯಗಳ ಬಗೆಗೆ ತಿಳುವಳಿಕೆ ಮತ್ತು ದಾಖಲಿಸುವುದು ಎಂಬ ಯೋಜನೆ.

ಇದೇ ಜನವರಿಯಲ್ಲಿ ತುಮಕೂರಿನಲ್ಲಿ ನಡೆದ ರಾಜ್ಯ ಮಟ್ಟದ ಪಾರಂಪರಿಕ ವೈದ್ಯ ಸಮ್ಮೇಳನದಲ್ಲಿ ಭಾಗವಹಿಸಿದ ಈಕೆ ಗಿಡಮೂಲಿಕೆಯ ನಶಿಸುವಿಕೆಗೆ ಪ್ರಚಾರ ಹಾಗೂ ಅದರ ಬಗ್ಗೆ ಇತರರಿಗೆ ತರಬೇತಿ ನೀಡದೆ ಇರುವುದೇ ಕಾರಣ ಎನ್ನುತ್ತಾ ಗಿಡಮೂಲಿಕೆಗಳನ್ನು ಅಭಿವೃದ್ಧಿ ಪಡಿಸಲು ಜನ ಜಾಗೃತಿ ಅತ್ಯಗತ್ಯ ಎಂಬ ಅಭಿಪ್ರಾಯ ಮಂಡಿಸಿದಳು.

ಶೋಭಾಳಂತೆ, ಇತರ ವಿದ್ಯಾರ್ಥಿ ವೃಂದದಲ್ಲೂ ನಮ್ಮ ಸಸ್ಯ ಸಂಪತ್ತಿನ ಬಗ್ಗೆ ಆಸಕ್ತಿ ಬೆಳೆಯಲಿ ಎಂಬುದು ಹಿತ್ತಲಗಿಡದ ಹಾರೈಕೆ.

ಬಹು ಉಪಯೋಗಿ ಅಮೃತ ಬಳ್ಳಿ

ಅಮೃತ ಬಳ್ಳಿಯನ್ನು ತೋಟಗಳ ಬೇಲಿಗಳ ಮೇಲೆ ಚಪ್ಪರದ ಮೇಲೆ ಹಬ್ಬಿಸಿರುತ್ತಾರೆ. ಹಾಗೂ ಕಾಡುಗಳಲ್ಲಿ ಪೊದೆಗಳ ಮೇಲೂ ಸಹ ಹರಡಿರುತ್ತದೆ. ಇದರ ಎಲೆ ಹಸಿರು ಮತ್ತು ಮೃದುವಾಗಿರುತ್ತದೆ. ಹೂಗಳು ಗುಂಪು ಗುಂಪಾಗಿ ಬಿಡುತ್ತವೆ. ಇದರ ಸೊಪ್ಪು (ಎಲೆ) ಕಹಿಯಾಗಿದ್ದು ಬಾಯಲ್ಲಿ ಜಗಿದರೆ ಸ್ವಲ್ಪ ಲೋಳೆಯಂತೆ ಕಾಣುತ್ತದೆ.

ಈ ಬಳ್ಳಿಯನ್ನು ಅನೇಕ ಸಾಧಾರಣ ಕಾಯಿಲೆಗಳಲ್ಲಿ ಉಪಯೋಗಿಸುತ್ತಾರೆ. ಬಾಯಾರಿಕೆ, ವಾಂತಿ, ವಾಕರಿಕೆ (ಹೊಟ್ಟೆತೊಳೆಸುವಿಕೆ), ಮೈಮೇಲೆ ಗಂಧೆಗಳು, ಹೊಟ್ಟೆಯಲ್ಲಿ ಉರಿ, ಜಾಂಡೀಸ್ ಹೀಗೆ ಇನ್ನೂ ಅನೇಕ ಕಾಯಿಲೆಗಳ ಚಿಕಿತ್ಸೆಗೆ ಈ ಬಳ್ಳಿಯನ್ನು ಬಳಸುತ್ತಾರೆ.

ಮುಂಜಾನೆ ಬರಿ ಹೊಟ್ಟೆಯಲ್ಲಿ ಬಾಯನ್ನು ಸ್ವಚ್ಛಗೊಳಿಸಿ 3 ಎಲೆಗಳನ್ನು ಚೆನ್ನಾಗಿ ಜಗಿದು ಎಲೆಯ ರಸ ತೆಗೆದು ಮಜ್ಜಿಗೆ ಎಳನೀರಿನೊಂದಿಗೆ ಸೇವಿಸಿದರೆ ಜಠರ ಮತ್ತು ಕರುಳಿನ ಹುಣ್ಣುಗಳು ಕಡಿಮೆಯಾಗುತ್ತವೆ.

ಅಮೃತ ಬಳ್ಳಿಯ ಎಲೆಗಳನ್ನು ತಿನ್ನುವುದರಿಂದ ಕಣ್ಣಿನ ದೃಷ್ಟಿ ಹೆಚ್ಚುತ್ತದೆ. ಈ ಬಳ್ಳಿಯ ಕಾಂಡಗಳನ್ನು ಕತ್ತರಿಸಿ ಮರಳಿನಲ್ಲಿ ನೆಟ್ಟು ತೇವಾಂಶವನ್ನು ಅರಿತು 7 ಹಾಗೂ 8 ದಿನಗಳಿಗೊಮ್ಮೆ ನೀರು ಕೊಟ್ಟರೆ ಕಾಂಡಗಳು ಚಿಗುರೊಡೆದು ಹೊಸ ಸಸ್ಯಗಳು ವೃದ್ಧಿಯಾಗುತ್ತವೆ. ಸಿದ್ಧಪಡಿಸಿದ ಗುಂಡಿ 3-4 ಅಡಿಯಿದ್ದು ಇದಕ್ಕೆ ತಿಪ್ಪೆಗೊಬ್ಬರ, ಹಸಿರೆಲೆ ಗೊಬ್ಬರ ಮಿಶ್ರಣ ಮಾಡಿ ಮಣ್ಣಿನಿಂದ ಮುಚ್ಚಿ ಮೇಲ್ಭಾಗದಲ್ಲಿ ಚಿಗುರಿದ ಹೊಸ ಕಾಂಡ ನೆಟ್ಟು ಆಶ್ರಯಕ್ಕೆ ಊರುಗೋಲನ್ನು ನೆಡಬೇಕು. ಜಮೀನುಗಳಲ್ಲಿ ಮುಳ್ಳು ಬೇಲಿಯ ಪಕ್ಕ, ಮರಗಳ ಪಕ್ಕ ಮೇ, ಜೂನ್ ತಿಂಗಳ ಮಳೆಗಾಲದಲ್ಲಿ ನೆಟ್ಟರೆ ಸಮೃದ್ಧಿಯಾಗಿ ಬೆಳೆಯುತ್ತವೆ. ಯಾವ ಕಾರಣಕ್ಕೂ ರಾಸಾಯನಿಕ ಗೊಬ್ಬರಗಳನ್ನು ಉಪಯೋಗಿಸಬಾರದು.

ಹುರುಳಿ ಚಿಕ್ಕನಹಳ್ಳಿ ಮಹಿಳೆಯರ ನಾಟಿ ಔಷಧಿಗಳು

ಅರಿಶಿನದ ಮಹತ್ವ

ಸೌಂದರ್ಯಕ್ಕೆ: ಹಸಿ ಅರಿಶಿನ ಪೇಸ್ಟ್ ಮಾಡಿ ಮಲಗುವ ಮುಂಚೆ ಹಚ್ಚಿ ಬೆಳಗ್ಗೆ ಎದ್ದ ತಕ್ಷಣ ತೊಳೆಯಬೇಕು. ಆಗ ಸೌಂದರ್ಯ ಹೆಚ್ಚುತ್ತದೆ.

ಉಗುರು ಸುತ್ತು: ಬೇವಿನ ಎಣ್ಣೆ, ಹಸಿ ಅರಿಶಿನ ಇವೆರಡನ್ನು ಮಿಶ್ರಣ ಮಾಡಿ ಎರಡು ಬಾರಿ ಹಚ್ಚಬೇಕು.

ಕಿವಿ ಸೋರುವಿಕೆ: ಹಸಿ ಅರಿಶಿನದ ರಸ, ಸಾಸಿವೆ ಎಣ್ಣೆ ಬಿಸಿ ಮಾಡಿ ಇವನ್ನು ಮಿಶ್ರಣ ಮಾಡಿ ಸಾಯಂಕಾಲದ ಸಮಯದಲ್ಲಿ 4 ತೊಟ್ಟುಗಳನ್ನು ಕಿವಿಯಲ್ಲಿ ಹಾಕಬೇಕು.

ಮೊಡವೆಗಳಿಗೆ: ಹಸಿ ಅರಿಶಿನ, ಬೇವಿನ ಎಣ್ಣೆ ಇವೆರಡನ್ನು ಮಿಶ್ರಣ ಮಾಡಿ ಪೇಸ್ಟ್ ತರ ಮಾಡಿ ಮುಖಕ್ಕೆ ಎರಡು ಗಂಟೆಗಳವರೆಗೆ ಹಚ್ಚಿ ತೊಳೆಯಬೇಕು.

ಕಣ್ಣು ಕೆಂಪಾಗುವುದು: ಹಸಿ ಅರಿಶಿನ, ಹುಣಸೆ ಚಿಗುರು, ಇವೆರಡನ್ನು ಬಟ್ಟೆಯಲ್ಲಿ ಹಾಕಿ ಕಟ್ಟಿ ಅದನ್ನು ಬಿಸಿ ನೀರಿನಲ್ಲಿ ಇಡಬೇಕು. ಇದರ ಹಬೆಯನ್ನು ಕಣ್ಣಿಗೆ ಬಿಡಬೇಕು.

ವೀಳ್ಯದೆಲೆಯಿಂದ

ವಾಂತಿ, ಬೇದಿ ಮತ್ತು ಜೀರ್ಣಶಕ್ತಿಗೆ: ಎಲೆಯನ್ನು ಚೆನ್ನಾಗಿ ತೊಳೆದು ಒಂದು ಚುಟುಕಿ ಓಮ್‌ಕಾಳು, ಒಂದು ಚುಟುಕಿ ಸಕ್ಕರೆ ಇವೆಲ್ಲವನ್ನು ಚೆನ್ನಾಗಿ ಜಜ್ಜಿ ರಸವನ್ನು ತೆಗೆದು ಮಕ್ಕಳಿಗೆ ಕುಡಿಸಬೇಕು.

ಮೆಹಂದಿಯಿಂದ

ಕೈಕಾಲು ಉರಿತಕ್ಕೆ ಈ ಸೊಪ್ಪನ್ನು ರುಬ್ಬಿ ಕಾಲುಗಳ ತಳದಲ್ಲಿ ಹಚ್ಚಿದರೆ ಉರಿತ ಕಡಿಮೆಯಾಗುತ್ತದೆ.

ಮುಟ್ಟಿದರೆ ಮುನಿ ಸೊಪ್ಪಿನಿಂದ

ಚರ್ಮದ ಅಲರ್ಜಿಗೆ: ಈ ಸೊಪ್ಪಿನ ರಸ, ಯಾವುದಾದರೂ ಮೈಗೆ ಹಚ್ಚುವ ಎಣ್ಣೆಯಲ್ಲಿ ಮಿಶ್ರಣ ಮಾಡಿ ಮೈಗೆ ಹಚ್ಚಿ ಸ್ನಾನ ಮಾಡಬೇಕು.

ಸಕ್ಕರೆ ಕಾಯಿಲೆಗೆ: ಈ ಗಿಡವನ್ನು ಬೇರು ಸಮೇತ ಕಿತ್ತು ಜಜ್ಜಿ, ರಸವನ್ನು ತೆಗೆದು, ಬೆಳಿಗ್ಗೆ ಮತ್ತು ಸಾಯಂಕಾಲ ಕುಡಿಯಬೇಕು. ಒಂದು ಸಲಕ್ಕೆ ಒಂದು ಚಮಚದಷ್ಟು ಕುಡಿಯಬೇಕು.

ಗಾಯವಾದರೆ: ಸೊಪ್ಪನ್ನು ಪೇಸ್ಟ್‌ನಂತೆ ನುಣ್ಣಗೆ ಮಾಡಿ ಗಾಯವಿರುವ ಕಡೆ ಹಚ್ಚಬೇಕು.

ವಿಷ ಜಂತುಗಳು ಕಚ್ಚಿದರೆ: ಬೇರು ಸಮೇತ ಗಿಡವನ್ನು ಕಿತ್ತು, ಪೇಸ್ಟ್ ಮಾಡಿ ಕಚ್ಚಿದ ಕಡೆಗಳಿಗೆ ಹಚ್ಚಬೇಕು.

ಸಂಗ್ರಹ: ಸೀತಾಲಕ್ಷ್ಮಿ

ಮಾಹಿತಿ: ಸರಸ್ವತಿ, ಹುರುಳಿಚಿಕ್ಕನ ಹಳ್ಳಿ

ಲಕ್ಷ್ಮೀಕಾಂತಯ್ಯನ ಸುಟ್ಟಗಾಯದ ಅದ್ಭುತ ಔಷಧಿ ಎಣ್ಣೆ

ಡಾ. ಟಿ. ಎನ್. ಪ್ರಕಾಶ್

ಚಿಕ್ಕಮಗಳೂರಿನ ಕಮ್ಮರಡಿ ಸಮೀಪದ ಕೇಸಲೂರಿನ ಶ್ರೀನಾರಾಯಣ ಮೂರ್ತಿಗಳ ಐದು ವರ್ಷದ ಮಗಳು ಓದುವಾಗ ಸೀಮೆ ಎಣ್ಣೆ ದೀಪ ಮಗುಚಿ ದೇಹ ಪೂರ್ತಿ ಸುಟ್ಟುಹೋಗಿತ್ತು. ಡಾಕ್ಟರ್ ಈಕೆಗೆ ಔಷಧಿ ಕೊಡಲು ಸಾಧ್ಯವೇ ಇಲ್ಲ ಎಂದು ತೀರ್ಮಾನಿಸಿದ್ದರು. ಆದರೆ ಅದೃಷ್ಟವಶಾತ್ ಅದೇ ಕಮ್ಮರಡಿ ಸಮೀಪದ ಕುಂಬ್ರಕೊಡಿನ ಹಿರಿಯ ಜಮೀನ್ದಾರರಾದ ಶ್ರೀಲಕ್ಷ್ಮೀಕಾಂತಯ್ಯನವರ ಅದ್ಭುತ ಸುಟ್ಟಗಾಯದ ಔಷಧಿ ವಿಚಾರ ನಾರಾಯಣ ಮೂರ್ತಿಗಳ ಕಿವಿಗೆ ಬಿದ್ದಿತು. ದಟ್ಟಹಸಿರು ಬಣ್ಣದ, ತೆಂಗಿನ ಎಣ್ಣೆ ಮತ್ತು ಸಾಗುವಾನಿ ಮಿಶ್ರಿತ ಗಮಗಮಿಸುವ ವಾಸನೆ ಹೊಂದಿರುವ ಕಾಂತಯ್ಯನವರ ಈ ಔಷಧಿ ಎಣ್ಣೆಯನ್ನು ಉದ್ದನೆಯ ಕೋಳಿ ಪುಕ್ಕದಲ್ಲಿ ಈಕೆಯ ಗಾಯಕ್ಕೆಲ್ಲಾ ಮೆತ್ತಗೆ ಸವರಲಾಯ್ತು. ಇದನ್ನು ದಿನ ನಿತ್ಯ ಒಂದು ತಿಂಗಳವರೆಗೆ ಅನುಸರಿಸಲಾಯ್ತು. ಈಗ ಶ್ರೀನಾರಾಯಣ ಮೂರ್ತಿಗಳ ಪುತ್ರಿ ಸುಟ್ಟಗಾಯದ ಗುರುತೂ ಸಿಗದ ರೀತಿಯಲ್ಲಿ ಗುಣಮುಖಳಾಗಿರುವಳು. ಈ ರೀತಿ ಡಾಕ್ಟರ್ ಆಗದೆಂದು ಕೈಚೆಲ್ಲಿ ಕುಳಿತಾಗ, ಕಾಂತಯ್ಯನವರು ಮರು ಜೀವ ನೀಡಿರುವ ಉದಾಹರಣೆಗಳು ಹಲವಾರು.

ಲಕ್ಷ್ಮೀಕಾಂತಯ್ಯನವರು ಈ ಸುಟ್ಟಗಾಯದ ಎಣ್ಣೆಯನ್ನು ಒಂದು ರೀತಿಯ ಸಸ್ಯ ಮತ್ತು ಮೂರು ರೀತಿಯ ಬೇರು ಸೇರಿಸಿ ಚೆನ್ನಾಗಿ ಜಜ್ಜರುಬ್ಬಿ, ಅದಕ್ಕೆ ಸಾಸಿವೆ, ಜೀರಿಗೆ ಸ್ವಲ್ಪ ಆಮ್ಲವನ್ನೂ ಸೇರಿಸಿ, ಕೊಬ್ಬರಿ ಎಣ್ಣೆಯಲ್ಲಿ ಕುದಿಸಿ ತಯಾರಿಸುತ್ತಾರೆ. ಅವರು ಬಳಸುವ ಸಸ್ಯ ಮತ್ತು ಬೇರುಗಳ ಪರಿಚಯ ಅವರಿಗೆ ಚೆನ್ನಾಗಿದ್ದರೂ, ಹೆಸರು ತಿಳಿಯದು. ಹಾಗೇ ಅದರ ವಿವರವನ್ನೂ ಇದುವರೆಗೆ ಯಾರಿಗೂ ಅವರು ತಿಳಿಸಿಲ್ಲ. ಇದೂ ಒಂದು ರೀತಿಯ ದೇಶೀಯ ಪದ್ಧತಿಯ ಪೇಟೆಂಟ್ ತಾನೇ? ಆದರೆ ಅವರು ಈ ಔಷಧಿ ಎಣ್ಣೆಗೆ ಬಿಡಿಕಾಸನ್ನೂ ಪಡೆಯುವುದಿಲ್ಲ. ಆಯ ಕಟ್ಟಿನ ಜಾಗ ಒಂದನ್ನು ಬಿಟ್ಟು, ದೇಹದ ಮತ್ತಾವುದೇ ಭಾಗ ಎಷ್ಟೇ ಪ್ರಮಾಣದಲ್ಲಿ ಸುಟ್ಟರಲಿ, ಅದನ್ನು ಗುಣಪಡಿಸಬಹುದೆನ್ನುವುದು ಲಕ್ಷ್ಮೀಕಾಂತಯ್ಯನವರ ದೃಢವಾದ ಅಭಿಪ್ರಾಯ. ವರ್ಷಕ್ಕೆ ಏನಿಲ್ಲವೆಂದರೂ ಸುಮಾರು 100 ಜನ ಕಾಂತಯ್ಯನವರ ಔಷಧಿಯಿಂದ ಗುಣ ಹೊಂದುತ್ತಲಿರುವರು. ಈ ಔಷಧಿ ತಯಾರಿಸಲು ಒದ್ದಾಟ ಜಾಸ್ತಿಯಾದರೂ ಕೂಡ, ಪತ್ನಿ ಸತ್ಯಭಾಮೆಯವರ ನೆರವಿನಿಂದ ಕನಿಷ್ಠ 25 ಕೆ.ಜಿ. ಗಳಷ್ಟು ಈ ಎಣ್ಣೆಯನ್ನು ಪ್ರತೀ ವರ್ಷ ತಯಾರಿಸಿ ಲಕ್ಷ್ಮೀಕಾಂತಯ್ಯನವರು ಹಂಚುತ್ತಿರುವರು. ಸುತ್ತಮುತ್ತಲಿನ 10-12 ಮೈಲು ವ್ಯಾಪ್ತಿಯ ಊರುಗಳಲ್ಲಿ ಲಕ್ಷ್ಮೀಕಾಂತಯ್ಯನವರ ಈ ಔಷಧಿ ಚಿರಪರಿಚಿತ.

ತಂದೆಯ ಈ ಅದ್ಭುತ ಔಷಧಿಯನ್ನು ಮತ್ತಷ್ಟು ವ್ಯವಸ್ಥಿತ ರೀತಿಯಲ್ಲಿ ಅಧಿಕವಾಗಿ ತಯಾರಿಸಿ, ತಮ್ಮದೇ ಆದ ಒಂದು ಬ್ರಾಂಡ್ ಹೆಸರು ಕೊಟ್ಟು ವಾಣಿಜ್ಯಗೊಳಿಸ ಬೇಕೆನ್ನುವುದು ಅವರ ಕಿರಿಯ ಪುತ್ರ ನಾಗೇಂದ್ರನ ಆಸೆ. ಇದನ್ನು ದೊಡ್ಡ ಪ್ರಮಾಣದಲ್ಲಿ ತಯಾರಿಸಲು ಕೆಲವು ಯಂತ್ರಗಳು, ಕಟ್ಟಡ, ಅಗತ್ಯ ಔಷಧಿ ಸಸ್ಯ, ಬೇರುಗಳನ್ನು ಬೆಳೆಸಲು ಜಾಗ ಇತ್ಯಾದಿಗಳಿಗೆ ನಾಗೇಂದ್ರ ಸಂಪನ್ಮೂಲ ಹೊಂದಿಸಿಕೊಳ್ಳಬೇಕಾಗಿದೆ. ಹಾಗೇ ಈ ಔಷಧಿಯನ್ನು ಪೇಟೆಂಟ್ ಮಾಡಿಸಿ, ದೊಡ್ಡ ಪ್ರಮಾಣದಲ್ಲಿ ಯಾವುದಾದರೂ ಔಷಧಿ ತಯಾರಿಸುವ ಕಂಪನಿಗಳ ಜೊತೆಯಲ್ಲಿ ವ್ಯವಹರಿಸಲೂ ಸಾಧ್ಯ. ಹಾಗೇ ಈ ಔಷಧಿಯ ಪರಿಣಾಮವನ್ನು ಬೆಂಗಳೂರಿನಲ್ಲಿರುವ ಸುಟ್ಟಗಾಯದ ಆಸ್ಪತ್ರೆಗಳಿಗೆ ಬರುವ ರೋಗಿಗಳ ಮೇಲೆ ಪರೀಕ್ಷಿಸಿ ನೋಡಲೂ ಬಹುದು. ಲಕ್ಷ್ಮೀಕಾಂತಯ್ಯನವರ ಈ ಅದ್ಭುತ ಔಷಧಿ ಎಣ್ಣೆಯನ್ನು ಈ ಬಾರಿಯ ತಳಮಟ್ಟದ ಜನರ ಅನುಶೋಧನೆಗಳ ರಾಷ್ಟ್ರೀಯ ಸ್ಪರ್ಧೆಗೆ ಕಳುಹಿಸಲು ಹಿತ್ತಲಗಿಡ ಯೋಚಿಸುತ್ತಿದೆ. ಇವೆಲ್ಲಾ ಯಶಸ್ವಾದಲ್ಲಿ ಮಲೆನಾಡು ಪ್ರಾಂತ್ಯದಲ್ಲಿ ಸುಟ್ಟಗಾಯದಿಂದ ನರಳುವ ಹಲವರಿಗೆ ಹೊಸ ಬದುಕು ದೊರೆತು ಪಾರಾಗುವುದರಲ್ಲಿ ಸಂಶಯವಿರದು.

ಈ ಎಣ್ಣೆಯನ್ನು ಪಡೆಯಲು ಇಚ್ಛಿಸುವವರು ಸಂಪರ್ಕಿಸಬೇಕಾದ ವಿಳಾಸ:

ಲಕ್ಷ್ಮೀಕಾಂತಯ್ಯ, ಕುಂಬ್ರಕೋಡು
ಕಮ್ಮರಡಿ, ಕೊಪ್ಪತಾಲ್ಲೂಕು
ಚಿಕ್ಕಮಗಳೂರು ಜಿಲ್ಲೆ - 577 125

ಗಟ್ಟಿಯಾಗುತ್ತಿರುವ ಹಿತ್ತಲಗಿಡ - ಮೂಲಿಕಾ ವನ

ಬೆಂಗಳೂರಿನ ನಾಗರಭಾವಿ ಸಮೀಪ, ಜ್ಞಾನ ಭಾರತಿ ವಿಶ್ವವಿದ್ಯಾನಿಲಯಕ್ಕೆ ಒತ್ತಿಕೊಂಡು ಮೂಲಿಕಾ ವನವೊಂದಿದೆ. ಸುಮಾರು ನಲವತ್ತೈದು ಎಕರೆ ಪ್ರದೇಶದ ಈ ಮೂಲಿಕಾ ವನದಲ್ಲಿ ಎಂಟು ನೂರು ಸಸ್ಯ ಪ್ರಭೇದಗಳಿವೆ.

1987ರಲ್ಲಿ ಆರಂಭವಾದ ಈ ಧನ್ವಂತರಿ ವನಕ್ಕೆ ಅಂದು 50 ಎಕರೆಯಷ್ಟು ಜಾಗ ಮಂಜೂರಾಗಿತ್ತಂತೆ. ಒತ್ತುವರಿ ಗಲಾಟೆಯಲ್ಲಿ ಉಳಿದಿದ್ದು ಕೇವಲ 37 ಎಕರೆ ಮಾತ್ರ. ಇತ್ತೀಚೆಗೆ ಬೆಂಗಳೂರು ವಿಶ್ವವಿದ್ಯಾನಿಲಯ ಸುಮಾರು 8 ಎಕರೆ ಜಾಗ ಮಂಜೂರು ಮಾಡಿದೆ.

ಭಾರತೀಯ ವೈದ್ಯ ಪದ್ಧತಿ ಇಲಾಖೆ ಹಾಗೂ ಕರ್ನಾಟಕ ಅರಣ್ಯ ಇಲಾಖೆಯ ಜಂಟಿ ಸಹಯೋಗದಲ್ಲಿ ಈ ಧನ್ವಂತರಿ ವನದ ಉಸ್ತುವಾರಿ ನಡೆಯುತ್ತಿದೆ. ರಾಜ್ಯದ ಅನೇಕ ಕಡೆಗಳಲ್ಲಿ ಇಂತಹ ಮಾದರಿ ವನಗಳಿವೆ.

ಕೃಷಿ, ಅರಣ್ಯ, ಆಯುರ್ವೇದ ಮತ್ತು ಸಸ್ಯ ವಿಜ್ಞಾನದ ಅಭ್ಯಾಸಿಗಳಿಗೆ ಇದೊಂದು ಆಸಕ್ತಿಯ ತಾಣ.

ಮೂಲ ಲೇಖನ: ಗೀತಾ ನಾ. ಸತ್ಯ
ಕೃಪೆ: ಪ್ರಜಾವಾಣಿ 24-2-2001.

ಕೃಷಿ ಹೊಂಡಗಳು

ಲೇಖಕರು: ಎಂ.ಎಚ್.ವಡ್ಡಿ, ಎಸ್.ಕೆ.ಮೇಟಿ ಮತ್ತು ರಾಜು ತೆಗ್ಗೆಳ್ಳಿ,
ಕೃಷಿ ವಿಜ್ಞಾನ ಕೇಂದ್ರ, ಗುಲಬರ್ಗಾ - 585 101, ಕೃಪೆ: ಕೃಷಿ ಲೋಕ, ಜುಲೈ 2001.

ಮಳೆಯಾಧಾರಿತ ಕೃಷಿಯಲ್ಲಿ ಮಳೆಯ ಅನಿಶ್ಚಿತತೆ, ಏರುಪೇರು, ಮಣ್ಣಿನ ನಿಸ್ಸಾರತೆ, ನೀರನ್ನು ಸರಿಯಾಗಿ ನಿಯಂತ್ರಿಸಿ ಬಳಸದೇ ಇರುವುದು, ಉತ್ಪಾದನೆ ಕಡಿಮೆಯಾಗಲು ಮುಖ್ಯ ಕಾರಣ. ಅತ್ಯಂತ ಬಿಕ್ಕಟ್ಟಿನ ಕಾಲದಲ್ಲಿ ನೀರಿನ ಕೊರತೆಯೇ, ಅನೇಕ ವೇಳೆ ಬೆಳೆದು ನಿಂತ ಪೈರು ಒಣಗುವುದಕ್ಕೆ ಅಥವಾ ಕಡಿಮೆ ಇಳುವರಿಗೆ ಕಾರಣ. ಆದರೆ ಭೂಮಿಯ ಮೇಲೆ ಸುರಿದ ಮಳೆಯ ನೀರಿನ ಶೇ.20ರಿಂದ 30ರಷ್ಟು ಭಾಗ ಕೊಚ್ಚಿ ಹರಿದು ನದಿಗಳನ್ನೋ, ಸಮುದ್ರವನ್ನೋ ಸೇರುವುದು. ಆದ್ದರಿಂದ ಈ ರೀತಿ ವ್ಯರ್ಥವಾಗಿ ಹರಿದು ಹೋಗುವ ನೀರನ್ನು ತಡೆದು ಕೂಡಿಟ್ಟು ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಉಪಯೋಗಿಸಿ ಬೆಳೆಗಳನ್ನು ಕಾಪಾಡುವುದು ಅಗತ್ಯ. ವ್ಯರ್ಥವಾಗಿ ಹರಿದು ಹೋಗುವ ನೀರಿಗೆ ಒಡ್ಡುಗಳನ್ನು ಹಾಕಿ ಇಲ್ಲವೇ ಕಟ್ಟೆಯನ್ನು ಕಟ್ಟುವುದು ಅಥವಾ ತಗ್ಗಿನ ಪ್ರದೇಶದಲ್ಲಿ ಹೊಂಡವನ್ನು ತೋಡಿ ಹರಿಯುವ ನೀರನ್ನು ಸಂಗ್ರಹಿಸಿ ಒಣ ಪೈರುಗಳನ್ನು ಕಾಪಾಡುವುದು ಒಂದು ಮುಖ್ಯವಾದ ವಿಷಯ.

ಕೃಷಿ ಹೊಂಡಗಳ ಅನುಕೂಲಗಳು

- ರೈತರಿಗೆ ಮನೆ ಕೆಲಸಗಳಿಗೂ, ಪಶುಪಾಲನೆಗೂ ಇತರ ಚಟುವಟಿಕೆಗಳಿಗೂ ನೀರು ಒದಗಿಸುವುದು.
- ಬೆಳೆದು ನಿಂತಿರುವ ಪೈರಿಗೆ ಅತಿ ಕ್ಲಿಷ್ಟ ಕಾಲದಲ್ಲಿ ನೀರು ಒದಗಿಸ ಬಹುದು.
- ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಹರಿಯುವ ನೀರಿನ ವೇಗ ತಡೆದು ಗಟ್ಟಿ ಮಣ್ಣಿನ ಸವೆತ ತಪ್ಪಿಸಬಹುದು.
- ಭೂಮಿಯಲ್ಲಿ ಅಂತರ್ಜಲದ ಮಟ್ಟ ಹೆಚ್ಚುತ್ತದೆ.
- ಕೆಲವು ಪ್ರದೇಶಗಳಲ್ಲಿ ದೊರೆಯುವ ಅಂತರ್ಜಲ ಉಪ್ಪು ನೀರು ಕೃಷಿಗೆ ಉಪಯುಕ್ತವಲ್ಲ, ಆದ್ದರಿಂದ ಅಂತಹ ಪ್ರದೇಶಗಳಲ್ಲಿ ಕೃಷಿ ಹೊಂಡ ಮಾಡಿ ಮಳೆ ನೀರು ಸಂಗ್ರಹಿಸಿ ಬೇಸಾಯಕ್ಕೆ ನೀರಾವರಿ ಒದಗಿಸಬಹುದು.
- ಮಳೆಗಾಲ ಮುಗಿದ ಮೇಲೂ ಬೇಸಿಗೆಯಲ್ಲಿ ಹೂವು, ತರಕಾರಿ ಇತ್ಯಾದಿ ಬೆಳೆಯಬಹುದು.
- ಮಳೆ ನೀರು ಹೆಚ್ಚಾಗಿ, ಜೌಗು ನೆಲವಾಗಿದ್ದಲ್ಲಿ ಹೆಚ್ಚಾದ ನೀರನ್ನು ಕಾಲುವೆಗಳ ಮೂಲಕ ಹಾಯಿಸಿ ಹೊಂಡಗಳಲ್ಲಿ ಸಂಗ್ರಹಿಸಿ ಪುನ: ಅತ್ಯವಶ್ಯಕ ಕಾಲದಲ್ಲಿ ಉಪಯೋಗಿಸಬಹುದು.
- ಮಡಿಗಳನ್ನು ಮಾಡಿ, ಭತ್ತ, ರಾಗಿ, ತರಕಾರಿ ನಾಟಿ ಮಾಡಲು ಸಸಿಗಳನ್ನು ತಯಾರಿಸಬಹುದು.
- ಸಾಕಷ್ಟು ಪ್ರಮಾಣದಲ್ಲಿ ನೀರು ಸಿಕ್ಕಲ್ಲಿ ಮೀನುಗಾರಿಕೆಯನ್ನೂ ಮಾಡ ಬಹುದು.
- ಹೊಂಡಗಳ ಸುತ್ತಲೂ ಕಾಲುವೆ ಹಾಗೂ ಬದುಗಳ ಅಕ್ಕ ಪಕ್ಕಗಳಲ್ಲಿ ಹುಲ್ಲು ಬೆಳೆಸಿದರೆ ದನಕರುಗಳಿಗೆ ಮೇವು ಸಿಕ್ಕುತ್ತದೆ.
- ಹೊಂಡದ ಸುತ್ತಲೂ ಸೀತಾಫಲ, ಸೀಬೆ, ನುಗ್ಗೆ, ಅಗಸೆ, ಹೊಂಗೆ, ಬೇವು ಮುಂತಾದ ಮರಗಳನ್ನು ಬೆಳೆಸಿ ಹಸಿರು ವಾತಾವರಣ ನಿರ್ಮಿಸಬಹುದು.

ಕೃಷಿ ಹೊಂಡ ತೋಡಲು ಒಂದು ಅಚ್ಚುಕಟ್ಟಿನ ತಗ್ಗಿನ ಪ್ರದೇಶವು ಅತ್ಯಂತ ಸೂಕ್ತ ಸ್ಥಳ. ಈ ರೀತಿ ತಗ್ಗಿನ ಪ್ರದೇಶದಲ್ಲಿ ಹೊಂಡವನ್ನು ಗುರುತಿಸುವಾಗ ಅದು ತೀರ ಕೊನೆಯಲ್ಲಿರದೆ ಅದನ್ನು ಜಮೀನಿನ ಮೂರನೇ ಎರಡು ಭಾಗವು ಅಚ್ಚು ಕಟ್ಟಿನಲ್ಲಿರುವಂತೆಯೂ ಮತ್ತು ಮೂರನೇ ಒಂದು ಭಾಗವನ್ನು ಆಯಕಟ್ಟಿನ ಮಧ್ಯದಲ್ಲಿರುವಂತೆಯೂ ಆಯ್ಕೆ ಮಾಡುವುದು ಒಳ್ಳೆಯದು. ಹೊಂಡದಲ್ಲಿ ಸಂಗ್ರಹವಾದ ನೀರು ಬಿಸಿಲಿಗೂ, ಗಾಳಿಗೂ ಆವಿಯಾಗಿ ಇಲ್ಲವೇ, ಹೊಂಡದ ತಳಭಾಗದಿಂದಲೂ, ಅಕ್ಕಪಕ್ಕದ ಬದುಗಳ ಮೂಲಕವೂ ಸೋರಿ ನಷ್ಟವಾಗುವುದುಂಟು. ಈ ರೀತಿ ಕೂಡಿಟ್ಟ ನೀರಿನ ನಷ್ಟದ ಪ್ರಮಾಣವನ್ನು ಆಯಾ ಪ್ರದೇಶದಲ್ಲಿ ದೊರಕುವ ಕಲ್ಲು ಚಪ್ಪಡಿ, ಜೇಡಿ, ಗಾರೆ, ಸಿಮೆಂಟು ಗಾರೆಗಳಿಂದ ಅಕ್ಕ ಪಕ್ಕದ ಬದುಗಳ ಗೋಡೆಗಳನ್ನು, ಹೊಂಡದ ತಳಭಾಗವನ್ನೂ ನಿರ್ಮಿಸಿ ಹಾಗೂ ಹೊಂಡದ ಮೇಲ್ಭಾಗವನ್ನು ಪ್ಲಾಸ್ಟಿಕ್ ಹಾಳೆಗಳಿಂದ ಮುಚ್ಚಿ ಕಡಿಮೆ ಮಾಡಬಹುದು.

ಹೊಂಡದ ಆಳತೆ ಮತ್ತು ಆಕಾರ

ಸ್ಥಳೀಯ ಸ್ಥಿತಿಗತಿಗೆ ಅನುಸಾರವಾಗಿಯೂ ಆಯಾ ಪ್ರದೇಶದ ಮಣ್ಣಿನ ಗುಣಕ್ಕೆ ಅನುಗುಣವಾಗಿ, ಹೂಳು ಕಡಿಮೆಯಾಗುವಂತೆ ಕೊರಕಲಾಗದಂತೆ, ಆಕಾರ, ಅಳತೆ ನಿರ್ಧರಿಸಬಹುದು. ಸಾಮಾನ್ಯವಾಗಿ ಒಂದು ಹೆಕ್ಟೇರ್ ಭೂಮಿಗೆ 0.2 ಹೆಕ್ಟೇರ್ ಹೊಂಡ ಸಾಕು. ಸಣ್ಣ ಮತ್ತು ಅತಿ ಸಣ್ಣ ರೈತರ ಅವಶ್ಯಕತೆ ಗಮನಿಸಿದರೆ 45 ಮೀ. ಉದ್ದ, 45 ಮೀ. ಅಗಲ ಮತ್ತು 3 ಮೀ. ಆಳ ಇರುವ ಹೊಂಡವು ಸಾಕು.

ಜಮೀನಿನ ಇಳಿಜಾರು ಪ್ರಮಾಣ 1:1 ಇದ್ದಲ್ಲಿ ಹೊಂಡದ ಒಳ ಭಾಗದ ಆಯ 39 ಮೀ. ಉದ್ದ, 39 ಮೀ. ಅಗಲ ಮತ್ತು 3 ಮೀ. ಆಳ ಇರಬೇಕು. ಹೊಂಡದಲ್ಲಿ ನೀರನ್ನು ತುಂಬಲು, ಹೊರಗೆ ಹರಿದು ಹೋಗುವಂತೆ ತೂಬುಗಳನ್ನು ಮಾಡಬೇಕು.

ಸಿಮಾರೂಬಾ

ಲೇಖಕರು: ಶಾಂತಾ ಹಿರೇಮಠ ಮತ್ತು ಶ್ಯಾಮಸುಂದರ ಜೋಶಿ

ಪ್ರಕಾಶಕರು: ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಹಾಗೂ ರಾಷ್ಟ್ರೀಯ ಎಣ್ಣೆ ಬೀಜ ಮತ್ತು ವನಸ್ಪತಿ ನಿಗಮ, ಗುರುಗಾಂವ್.

ಶೇಂಗಾ, ತೆಂಗಿನಕಾಯಿ ಎಣ್ಣೆಯ ಪರಿಚಯ ಮಾತ್ರ ಇದ್ದ ನಮಗೆ ನಿಧಾನವಾಗಿ ಸೂರ್ಯಕಾಂತಿ, ಪಾಮೊಲಿನ್ ಎಣ್ಣೆಗಳ ಪರಿಚಯವಾಯಿತು. ಈಗ ಹೊಸದಾಗಿ ಇನ್ನೊಂದು ಎಣ್ಣೆ ಸಿಮಾರೂಬಾ. ಈ ಸಿಮಾರೂಬಾದ ಉಪಯೋಗ ಕೇವಲ ಖಾದ್ಯತೈಲವಾಗಿ ಮಾತ್ರವಲ್ಲ; ಸಾಬೂನು, ಔಷಧಿ ತಯಾರಿಕೆಗೂ ಇದು ಉಪಯುಕ್ತ ಎನ್ನುತ್ತಾರೆ ಲೇಖಕರು. ಗೊಬ್ಬರವಾಗಿ ಬಳಸಬಹುದಾದ ಹಿಂಡಿ, ಬೀಜದ ಕವಚದಿಂದ ರಟ್ಟಿನ ತಯಾರಿಕೆ, ಮರದ ಕಾಂಡದಿಂದ ಮನೆ ಬಳಕೆಯ ಉಪಕರಣ, ಕಾಗದ, ಉರುವಲು ಹೀಗೆ ನಾನಾ ರೀತಿಯ ಬಳಕೆ ಸಾಧ್ಯವಂತೆ. ಲೇಖಕರು ಪಟ್ಟಿ ಮಾಡಿರುವ ಉಪಯುಕ್ತಗಳನ್ನು ಓದುತ್ತಾ ಹೋಗುವಾಗ ಇದೂ ಒಂದು ಕಲ್ಪವೃಕ್ಷವೇ ಎಂಬ ಉದ್ಗಾರ ಹೊರಬಂದರೆ ಆಶ್ಚರ್ಯವಿಲ್ಲ.

7-15 ಮೀಟರ್ ಎತ್ತರ ಬೆಳೆಯುವ ಈ ಮರ ನೆಟ್ಟ 6-8 ವರ್ಷಗಳಲ್ಲಿ ಇಳುವರಿ ಕೊಡಲಾರಂಭಿಸುತ್ತದೆಯಂತೆ. ಹೆಕ್ಟೇರ್‌ಗೆ ವರ್ಷವೊಂದಕ್ಕೆ 2000 ಕೆ.ಜಿ. ಎಣ್ಣೆ ಬೀಜದ ಇಳುವರಿ ನೀಡುವ ಈ ಮರ, ಸುಮಾರು 60 ವರ್ಷ ಕಾಲ ಬಾಳುತ್ತದೆಯಂತೆ. ಸಸಿಯಿಂದ ಸಸಿಗೆ 5 ಮೀಟರ್ ಅಂತರದಲ್ಲಿ ನಾಟಿ ಮಾಡುವ ಈ ಗಿಡಗಳಲ್ಲಿ ಹೆಣ್ಣು ಮತ್ತು ಗಂಡು ಎಂಬ ಭೇದವಿರುವುದರಿಂದ ಸಿಮಾರೂಬಾ ತೋಟದಲ್ಲಿ ಸುಮಾರು 60 ಮೀಟರ್ ಅಂತರದಲ್ಲಿ ಒಂದೊಂದು ಗಂಡು ಹೂ ಬಿಡುವ ಮರವಿದ್ದರೆ ಒಳ್ಳೆಯದು. ಗಿಡ ನೆಟ್ಟ ಮೊದಲು ಕೆಲವು ವರ್ಷಗಳವರೆಗೆ ಅಂತರ ಹಾಗೂ ಮಿಶ್ರ ಬೇಸಾಯ ಕೂಡಾ ಮಾಡಬಹುದಂತೆ.

ಓದುಗರಿಗೆ ಸಿಮಾರೂಬಾದ ಬೇಸಾಯ ಕ್ರಮ, ಸಸ್ಯ ಸಂರಕ್ಷಣೆ, ಕೊಯ್ಲು ಮತ್ತು ನಂತರದ ನಿರ್ವಹಣೆ ಹೀಗೆ ಅಗತ್ಯವಾದ ಸಮಸ್ತ ವಿವರಗಳನ್ನು ನೀಡುತ್ತದೆ ಈ ಪುಸ್ತಕ.

ಬಂಜರು ಭೂಮಿಯಲ್ಲಿ ನೈಸರ್ಗಿಕ ಸಂಪನ್ಮೂಲಗಳನ್ನೇ ಬಳಸಿಕೊಂಡು ಬೆಳೆಸಬಹುದಾದ ಈ ಮರ ಲೇಖಕರ ಮಾತಿನಲ್ಲೇ ಹೇಳುವುದಾದರೆ 'ದೈವದತ್ತ ಮರ'.

ಹುತ್ತದ ಸುತ್ತ ಮುತ್ತ

ಲೇಖಕರು: ವಿಜಯ್ ಅಂಗಡಿ.

ಪ್ರಕಾಶಕರು: ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ನಂ.2102/ಎ, ರಂಗೋಲಿ ಹಳ್ಳ, ಹಾಸನ - 573 201.

ಬೆಲೆ: ರೂ. 5.

ಹುತ್ತದೊಂದಿಗೆ ಗೆದ್ದಲಿನ ಪರಿಚಯ ಮಾಡಿಸುತ್ತಾ ಆರಂಭವಾಗುತ್ತದೆ ಈ ಪುಸ್ತಕ. ಗೆದ್ದಲಿನ ಹುಳುಗಳ ವಿವಿಧ ವರ್ಗಗಳು ಅದರಲ್ಲೂ ವಿಶಿಷ್ಟವಾದ ರಾಣಿ ಹುಳದ ವೈಶಿಷ್ಟ್ಯ ಜೊತೆಗೆ ಅದರದ್ದೇ ಆದ ಉಪಯೋಗವೂ ಇದೆ ಎನ್ನುತ್ತಾರೆ ಲೇಖಕರು. 'ಗೆದ್ದಲು' ಎಂದು ಹೀಗೆಳೆಯ ಬೇಡಿ, ಗೆದ್ದಲು ಮಣ್ಣಿನ ಸತ್ವ ಹೆಚ್ಚಿಸುತ್ತದೆಯಂತೆ. ಗೆದ್ದಲು ನಿರ್ಮಿಸುವ ಹುತ್ತ, ಅದು ಹುತ್ತದಲ್ಲಿ ಬೆಳೆಸುವ ಶಿಲೀಂಧ್ರ, ಗೂಡಿನ ಹವಾಮಾನ ಕಾಪಾಡುವುದು, ಶಿಲೀಂಧ್ರ ಬೆಳೆದು ಅಣಬೆಯಾಗುವುದು. ಹೀಗೆ ಸೂಕ್ಷ್ಮವಾಗಿ ವಿಷಯಗಳ ವಿವರವಿದೆ. ಇದರ ಜೊತೆಗೆ ಅಚ್ಚರಿ ಮೂಡಿಸುವಂತಹ ಹುತ್ತದ ಮಣ್ಣಿನ ಕೆಲವು ಅಪರೂಪದ ವಿವರಗಳೂ ಇವೆ. ಹುತ್ತದ ಮಣ್ಣು ಸ್ನಾನಕ್ಕೆ, ಮುಖ ಕ್ಷೌರಕ್ಕೆ ಅತ್ಯಂತ ಸೂಕ್ತ ಮಾತ್ರವಲ್ಲ ಅನೇಕ ಕಾಯಿಲೆಗಳ ಉಪಶಮನಕ್ಕೆ ಔಷಧ ಕೂಡಾ ಹೌದೆನ್ನುತ್ತಾರೆ ಲೇಖಕರು.

ಜೈವಿಕ ಕೃಷಿ

ಲೇಖಕರು: ವಿಜಯ್ ಅಂಗಡಿ

ಪ್ರಕಾಶಕರು: ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ನಂ.2102/ಎ, ರಂಗೋಲಿ ಹಳ್ಳ, ಹಾಸನ - 573 201.

ರಾಸಾಯನಿಕ ಕೃಷಿಗೆ ಪರ್ಯಾಯವಾಗಿ ಪರಿಸರ ಪ್ರಿಯ ಕೃಷಿ ಪದ್ಧತಿಗಳತ್ತ ಹೊರಳಿ ನೋಡುತ್ತಿರುವವರಿಗೆ ಆರಂಭದ ಮಾರ್ಗದರ್ಶನ ಮಾಡಬಲ್ಲ ಪುಸ್ತಕ ಇದು. ಈ ಪರ್ಯಾಯ ಪ್ರಯತ್ನಗಳು ಆದಾಯ ತರಬಲ್ಲದೇ ಎಂಬ ಪ್ರಶ್ನೆಗಳಿಗೆ ಉತ್ತರವಾಗಿ ಖರ್ಚು, ಆದಾಯದ ಲೆಕ್ಕಾಚಾರ ಸರಿಯಾದರೆ, ಇದರಿಂದ ಲಾಭ ಸಾಧ್ಯ ಎನ್ನುತ್ತಾ ಈ ಪರಿಸರ ಪ್ರಿಯ ಪದ್ಧತಿ ಅನುಸರಿಸಿ, ಲಾಭ ಪಡೆದಿರುವ ಉಡುಪಿಯ ಚೇರ್ಕಾಡಿ ರಾಮಚಂದ್ರರಾಯರನ್ನು ಉದಾಹರಿಸುತ್ತದೆ. ಜೈವಿಕ ಕೃಷಿ ಕೇವಲ ಕೃಷಿ ಪದ್ಧತಿಯಲ್ಲ ಇದೊಂದು ಚಿಂತನಾ ಕ್ರಮ. ಹೀಗಾಗಿ ಹಾಗೆ ಮಾಡಿ, ಹೀಗೆ ಮಾಡಿ ಎನ್ನುವ ಪದ್ಧತಿಗಳ ಪಟ್ಟಿಗೆ ಬದಲಾಗಿ ಭೂಮಿಯ ಬಗ್ಗೆ, ಕೃಷಿಯೊಂದಿಗೆ ಒಡನಾಡಿಯಾಗಿ ಬದುಕುವ ಪ್ರಾಣಿಗಳ ಬಗ್ಗೆ ಹಾಗೂ ಕೃಷಿಗೆ ಪೂರಕವಾದ ವಿಚಾರ ಚಿಂತನೆ ಪುಸ್ತಕದಲ್ಲಿ ಪ್ರಾಮುಖ್ಯ ಪಾತ್ರ ಪಡೆದಿದೆ. ಜೊತೆಗೆ ಕೆಲವು ಸರಳ ಪದ್ಧತಿಗಳ ವಿವರ ಹಾಗೂ ವಿವಿಧ ಪ್ರಾಣಿ ಮೂಲ ತ್ಯಾಜ್ಯದ ಗೊಬ್ಬರಗಳಿಂದ ಸಸ್ಯಕ್ಕೆ ಒದಗಿಸಬಹುದಾದ ಪೋಷಕಾಂಶಗಳ ವಿವರ ಕೂಡಾ ಇದೆ.

ಸಾವಯವ ತರಕಾರಿ ಹಿತ್ತಲು ಬೆಳೆಸುವುದು
(Organic Vegetable Gardening)
ಮತ್ತು
ರಾಸಾಯನಿಕ ರಹಿತ ಭತ್ತದ ಕೃಷಿ
(Rice - Non-chemical Pest Control)

ತಮ್ಮ ಹೊಲ ಮತ್ತು ತೋಟಗಳಲ್ಲಿ ಸಾವಯವ ಕೃಷಿ ಪದ್ಧತಿ ಅನುಸರಿಸಲಿಚ್ಛಿಸುವ ರೈತರಿಗೆ ಉಪಯುಕ್ತವಾಗುವ ಮಾಹಿತಿಯನ್ನು ಈ ಪುಸ್ತಕದಿಂದ ಪಡೆಯಬಹುದಾಗಿದೆ.

Publishers :

Centre for Indian Knowledge Systems, 30 (Old No.47C), Gandhi Mandapam Road, Kotturpuram, Chennai - 600 085, India.

ಅರಳೀಕಟ್ಟೆ

ಸಾಕಾಣಿಕೆಗೊಳಪಟ್ಟಿರುವ ಜೀವವಿವಿಧತೆಯ ಪ್ರಾಸ್ತಾವನ ಕಾರ್ಯ ತಂಡದ ಸಭೆ

ತಾ. 11ನೇ ಆಗಸ್ಟ್ 2001ರಂದು ಈ ಮೇಲ್ಕಂಡ ಸಭೆ ಬೆಂಗಳೂರು ಪಶುವೈದ್ಯ ಕಾಲೇಜಿನಲ್ಲಿ ಜರುಗಿರುತ್ತದೆ. ಇದರಲ್ಲಿ ವಿಜ್ಞಾನಿಗಳು, ಸ್ವಯಂಸೇವಾಸಂಘಗಳ ಪ್ರತಿನಿಧಿಗಳು, ಪತ್ರಕರ್ತ ಮತ್ತು ರೈತರು ಭಾಗವಹಿಸಿದ್ದು ಸಾಕಾಣಿಕೆಗೊಳ ಪಟ್ಟಿರುವ ಜೀವ ವಿವಿಧತೆ ಪ್ರಕಾರಗಳ ಬಗ್ಗೆ ಚರ್ಚಿಸಿರುತ್ತಾರೆ. ಈ ನಿಟ್ಟಿನಲ್ಲಿ ಕಾರ್ಯನೀತಿ ಮತ್ತು ಯೋಜನೆ ರೂಪಿಸಲು ಹಲವಾರು ಉಪತಂಡಗಳನ್ನು ನಿರ್ಮಿಸಿ, ಜವಾಬ್ದಾರಿ ವಹಿಸಲಾಗಿರುತ್ತದೆ. ಈ ಸಭೆಯ ಅಧ್ಯಕ್ಷತೆಯನ್ನು ಗ್ರೀನ್ ಫೌಂಡೇಶನ್‌ನ ಶ್ರೀಮತಿ ವನಜಾರಾಂ ಪ್ರಸಾದ್ ವಹಿಸಿದ್ದು, ಸಂಪಾದಕ ಡಾ. ಪ್ರಕಾಶ್ ಕಮ್ಮರಡಿ ನಿರ್ವಹಿಸಿಕೊಟ್ಟಿರುತ್ತಾರೆ.

ಹಾಸನದ ಪರಿಸರ ಪ್ರಿಯ ಕೃಷಿಕರ 37ನೇ ಸಮಾರಂಭ

ಬೇಲೂರಿನ ಸಮೀಪದ ಹೆಬ್ಬಾಳ ಗ್ರಾಮದ ಸಾವಯವ ಕೃಷಿಕ ಶ್ರೀಯುತ ಹೆಚ್.ಜಿ. ಮಲ್ಲೇಗೌಡರ ತೋಟದಲ್ಲಿ ಈ ಸಭೆ ತಾ. 24-06-2001 ರಂದು ನಡೆದಿದ್ದು, ರೈತರೇ ಬೆಳೆದ ಸಾವಯವ ಅರಿಶಿನ, ಮುಳ್ಳಿಲ್ಲದ ಮುಟ್ಟಿದರೆ ಮುನಿ ಬೀಜ, ತಾಜಮುಡಿ ಭತ್ತದ ಬೀಜ, ಉತ್ಕೃಷ್ಟನಿಂಬೆ, ಬೇವಿನ ಬೀಜ ಇತ್ಯಾದಿಗಳ ವಿನಿಮಯ ನೆಡೆದಿರುತ್ತದೆ.

ಕೃಷಿ ಸಂಶೋಧಕರ ಸಮಾವೇಶ

ದಕ್ಷಿಣ ಕನ್ನಡದ ಹಿರಿಯಡ್ಕದ ಸಿಂಡಿಕೇಟ್ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನದ ಆಶ್ರಯದಲ್ಲಿ ಕೃಷಿಕರಿಂದ ಕೃಷಿಕರಿಗಾಗಿ ಕೃಷಿಕರೇ ಅಭಿವೃದ್ಧಿಪಡಿಸಿದ ಸಾಧನ, ಸಲಕರಣೆಗಳ ಪ್ರದರ್ಶನ ರೇಖಾ ಚಿತ್ರ, ಛಾಯಾಚಿತ್ರ ಪ್ರಕಟಣೆ, ಪ್ರಾತ್ಯಕ್ಷಿಕೆ, ವಿಚಾರ ಮಂಥನಗಳ ಈ ಮೇಲಿನ ಸಮಾವೇಶ ದಿನಾಂಕ 7-4-2001ರಂದು ಬ್ರಹ್ಮಾವರದ ಪ್ರಾದೇಶಿಕ ಸಂಶೋಧನ ಕೇಂದ್ರದಲ್ಲಿ ಜರುಗಿರುತ್ತದೆ. ಇದರಲ್ಲಿ 73ಕ್ಕೂ ಅಧಿಕ ಯಂತ್ರ, ತಂತ್ರ, ಆವಿಷ್ಕಾರಗಳ ಪರಿಚಯವಾಗಿರುತ್ತದೆ.

ಆಹ್ವಾನ

ಕೃಷಿ ಪತ್ರಿಕೋದ್ಯಮ ಪ್ರಶಸ್ತಿ

ಕನ್ನಡದಲ್ಲಿ ಅರ್ಥಪೂರ್ಣ ಕೃಷಿ ಪತ್ರಿಕೋದ್ಯಮಕ್ಕೆ ಉತ್ತೇಜನ ನೀಡುವುದಕ್ಕಾಗಿ ಧಾರವಾಡದ ಪರ್ಯಾಯ ಕೃಷಿ ಮಾಧ್ಯಮ ಕೇಂದ್ರ ಇದೇ ಮೊದಲ ಬಾರಿಗೆ ರಾಜ್ಯಮಟ್ಟದ ವಾರ್ಷಿಕ ಪ್ರಶಸ್ತಿಯನ್ನು ಸ್ಥಾಪಿಸಿದೆ.

ಕೃಷಿ ಸಂಶೋಧನೆ ಮತ್ತು ಕೃಷಿ ಸಂವಹನದಲ್ಲಿ ಕೃಷಿಕಪರ ಒಲವು-ನಿಲುವುಗಳ ಅಗತ್ಯವನ್ನು ಪ್ರತಿಪಾದಿಸುವುದು ಇಂದಿನ ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಕೃಷಿ ಪತ್ರಿಕೋದ್ಯಮ ಮಹತ್ವದ ಕೊಡುಗೆ ನೀಡಬಲ್ಲದು. ಕೃಷಿಕರ ಅಗತ್ಯಗಳನ್ನಾಧರಿಸಿದ, ಅವರ ನೋವು-ನಲಿವುಗಳ ಮೇಲೆ ಬೆಳಕು ಚೆಲ್ಲುವ, ಅವರ ಸಮಸ್ಯೆಗಳ ಬಗ್ಗೆ ಜನಾಭಿಪ್ರಾಯ ಮೂಡಿಸುವ ವಸ್ತುನಿಷ್ಠ ಹಾಗೂ ವಿಚಾರಪೂರ್ಣ ಬರಹಗಳು ಕೃಷಿ ಪತ್ರಿಕೋದ್ಯಮವನ್ನು ಸದೃಢಗೊಳಿಸಬೇಕೆಂಬ ಆಶಯದೊಂದಿಗೆ ಈ ಪ್ರಶಸ್ತಿಯನ್ನು ಆರಂಭಿಸಲಾಗಿದೆ.

ಈ ಪ್ರಶಸ್ತಿ ಯೋಜನೆಯಲ್ಲಿ ಪ್ರಕಟಿತ ಬರಹಗಳಿಗೆ ಮಾತ್ರ ಅವಕಾಶವಿದ್ದು, ಎರಡು ವಿಭಾಗಗಳಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ. ಮೊದಲನೆಯದ್ದು ಕೃಷಿಕರೇ ಬರೆದ ಲೇಖನಗಳು; ಹಾಗೂ ಎರಡನೆಯದ್ದು ಮುಕ್ತ ವಿಭಾಗವಾಗಿದ್ದು, ಇದರಲ್ಲಿ ಕೃಷಿಕರೇತರ ಎಲ್ಲರೂ ಭಾಗವಹಿಸಬಹುದಾಗಿದೆ. ಆಸಕ್ತರು ಸೆಪ್ಟೆಂಬರ್ 2000 ದಿಂದ ಆಗಸ್ಟ್ 2001ರ ನಡುವೆ ಪ್ರಕಟಗೊಂಡ ಕೃಷಿಕಪರ ಬರಹ (ಮೂಲ ಪ್ರತಿ)ವನ್ನು ಕಳುಹಿಸಿಕೊಡಲು ಕೋರಲಾಗಿದೆ. ಲೇಖನಗಳು ಯಾವುದೇ ಪತ್ರಿಕೆ ಅಥವಾ ನಿಯತಕಾಲಿಕದಲ್ಲಿ ಪ್ರಕಟಗೊಂಡಿರಬಹುದು. ಲೇಖನದ ಜೆರಾಕ್ಸ್ ಪ್ರತಿ ಬೇಡ. ಒಬ್ಬರು ಗರಿಷ್ಠ ಎರಡು ಲೇಖನಗಳನ್ನು ಕಳುಹಿಸಬಹುದು. ಮೇಲಿನ ಯಾವ ವಿಭಾಗಕ್ಕೆ ಪ್ರವೇಶ ಕಳುಹಿಸುತ್ತಿದ್ದೀರಿ ಎಂಬುದನ್ನು ಸ್ಪಷ್ಟವಾಗಿ ನಮೂದಿಸಲಿ, ಪೂರ್ಣ ವಿಳಾಸ ಹಾಗೂ ಉದ್ಯೋಗದ ವಿವರ ಬರೆಯುವುದು ಅಗತ್ಯ. ಪ್ರವೇಶದೊಂದಿಗೆ ನಾಲ್ಕು ರೂ. ಸ್ಟಾಂಪ್ ಹಚ್ಚಿದ ಸ್ವವಿಳಾಸ ಬರೆದ ಲಕೋಟೆ ಲಗತ್ತಿಕರಿಸಲು ಕೋರಿಕೆ. ಪ್ರವೇಶ ಸ್ವೀಕರಿಸಲು ಸೆಪ್ಟೆಂಬರ್ 30 ಕೊನೆಯ ದಿನಾಂಕ. ಲೇಖನಗಳನ್ನು ಕಳುಹಿಸಬೇಕಾದ ವಿಳಾಸ: ನಿರ್ದೇಶಕ, ಪರ್ಯಾಯ ಕೃಷಿ ಮಾಧ್ಯಮ ಕೇಂದ್ರ, 1ನೇ ಮುಖ್ಯ ರಸ್ತೆ, 4ನೇ ಅಡ್ಡರಸ್ತೆ, ನಾರಾಯಣಪುರ, ಧಾರವಾಡ - 580 008.

ಪ್ರೊ. ಗುಪ್ತಾರ 7ನೇ ಶೋಧ ಯಾತ್ರೆ : ಭೀಕರ ಭೂಕಂಪದಿಂದ ನಲುಗಿದ ಗುಜರಾತ್‌ನ ಕಚ್ ಜಿಲ್ಲೆಯ ಜನರಿಗೆ ರಾಯಪುರ ತಾಲ್ಲೂಕಿನ 14 ಗ್ರಾಮಗಳ ಜನರಿಗೆ ಸಾಂತ್ವನ, ಶಿಕ್ಷಣ ನೀಡುತ್ತಾ ಶ್ರಮದಾನದ ಮೂಲಕ ಹಳ್ಳಿಯ ಪುನರ್ ನಿರ್ಮಾಣ ಕೈಗೆತ್ತಿಕೊಳ್ಳುವ ಅಭೂತಪೂರ್ವ ಶೋಧ ಯಾತ್ರೆ ಇದೇ ಜೂನ್ 16-29 ರವರೆಗೆ ಜರುಗಿರುತ್ತದೆ.

ಕೃಷಿ ಪತ್ರಿಕೋದ್ಯಮ ಕಾರ್ಯಾಗಾರ

ಧಾರವಾಡದ ಪರ್ಯಾಯ ಕೃಷಿ ಮಾಧ್ಯಮ ಕೇಂದ್ರ ಹಾಗೂ ಗದಗದ ಸಾವಯವ ಕೃಷಿಕರ ಸಂಘಟನೆ - ಧರಿತ್ರಿಯ ಜಂಟಿ ಆಶ್ರಯದಲ್ಲಿ ಬರುವ ಡಿಸೆಂಬರ್ 1 ಮತ್ತು 2ರಂದು ಗದಗದಲ್ಲಿ ಹಮ್ಮಿಕೊಂಡಿರುವ ರಾಜ್ಯ ಮಟ್ಟದ ಈ ಕಾರ್ಯಾಗಾರದಲ್ಲಿ ಕೃಷಿ ಪತ್ರಿಕೋದ್ಯಮದ ಮೂಲಭೂತ ಅಂಶಗಳ ಕುರಿತು ತರಬೇತಿ ನೀಡಲಾಗುವುದು. ರೈತರಿಗೆ ಮೊದಲ ಆದ್ಯತೆ. ಒಟ್ಟು 25 ಮಂದಿಗೆ ಮಾತ್ರ ಅವಕಾಶವಿದ್ದು, 100 ರೂ. ಶಿಬಿರ ಶುಲ್ಕ ನಿಗದಿಪಡಿಸಲಾಗಿದೆ. ಆಸಕ್ತರು ತಮ್ಮ ಕಿರು ಪರಿಚಯವನ್ನೊಳಗೊಂಡ ಅರ್ಜಿಯನ್ನು ಈ ವಿಳಾಸಕ್ಕೆ ಕಳುಹಿಸಲು ಕೋರಿಕೆ ವಿಳಾಸ: ಆರ್.ಎಸ್. ಪಾಟೀಲ್, ಶಿವ ಪ್ರಸಾದ್ ಲಾಡ್ಜ್ ಹಿಂದೆ, ಗದಗ - 582 101. ದೂರವಾಣಿ: 08372-37536. ಕೃಷಿ ರಂಗದ ಯಾವುದೇ ವಿಷಯದ ಕುರಿತು ಒಂದು ಪುಟಕ್ಕೆ ಮೀರದ ಬರಹವನ್ನು ಜೊತೆಗಿಟ್ಟರೆ ಆಯ್ಕೆಗೆ ಅನುಕೂಲ. ಅರ್ಜಿಯೊಂದಿಗೆ 4 ರೂ. ಸ್ಟಾಂಪ್ ಹಚ್ಚಿದ ಸ್ವವಿಳಾಸ ಬರೆದ ಕವರನ್ನು ಲಗತ್ತೀಕರಿಸಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಪ್ರತ್ಯೇಕ ತಿಳುಹಿಸಲಾಗುವುದು.

ಪುರುಷೋತ್ತಮ ಸನ್ಮಾನ

ಸಾವಯವ ಕೃಷಿಯ ಹರಕಾರ, ಕೃಷಿಋಷಿ ಕುರುವಳ್ಳಿ ಎಂ.ಪುರುಷೋತ್ತಮರಾಯರ ಪುಣ್ಯದಿನ (18-9-2000)ದಂದು 'ಮಣ್ಣು ಸಂರಕ್ಷಣೆ-ನಿರ್ವಹಣೆ' - ಈ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಕೃಷಿ ಕುಟುಂಬಕ್ಕೆ 'ಪುರುಷೋತ್ತಮ ಸನ್ಮಾನ' ನೀಡಿ ಸನ್ಮಾನಿಸಲಾಗುವುದು. ಹೆಚ್ಚಿನ ವಿವರಗಳಿಗೆ ಪುರುಷೋತ್ತಮರಾವ್ ಕೃಷಿ ಸಂಶೋಧನಾ ಪ್ರತಿಷ್ಠಾನ, 'ಕೃಷಿ ನಿವಾಸ', ಕುರುವಳ್ಳಿ ಅಂಚೆ, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ - 577 432 ಇವರನ್ನು ಸಂಪರ್ಕಿಸಬಹುದು.

ಪತ್ರಿಕೆ ನೊಂದಣಿ ಸಂಖ್ಯೆ 66842/96

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳು ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.40/-	ರೂ.400/-
ರೈತರು	ರೂ.50/-	ರೂ.500/-
ಇತರರು	ರೂ.60/-	ರೂ.600/-
ಸಂಸ್ಥೆಗಳು	ರೂ.350/-	ರೂ.2500/-
ಪೋಷಕರು	ರೂ.5000/- ಮತ್ತು ಅಧಿಕ	

(ವಿ.ಸೂ. ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್/ಚೆಕ್ ಮೂಲಕ *"ಸಂಪಾದಕರು, ಹಿತ್ತಲಗಿಡ, ಬೆಂಗಳೂರು"* ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

ತೆರೆದ ಅಂಚೆ

ಗೆ, ...

....

....

....

ವಿಳಾಸ

ಡಾ.ಟಿ. ಎನ್. ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ ಮತ್ತು ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065

Ph: 080-3637002, 8560267 (R)
email: hittalu@bgl.vsnl.net.in and prakashtnk@yahoo.com

Printed by Sri. S. Sridhar, Published by Smt. K. Meenakshi (Owner). Printed at "Navbharath Enterprises" No.10, Sirur Park 'B' Street, Sheshadripuram, Bangalore - 560 020 and Published at No.399, 14-B Cross, New Town Yelahanka, Bangalore - 560 064.
Edited by Dr. T.N. Prakash Kammaradi